# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 08-03-2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 01 | ಹೆಚ್.ಜಿ.ರಾಮಚಂದ್ರ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 02 | ಹೆಚ್.ಎಸ್.ಲಲಿತಾ | ಸದಸ್ಯರು | 2 | ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ. |
| 03 | ಮುನೀಂದ್ರ ಕುಮಾರ್.ಕೆ.ಎ. | ಸದಸ್ಯರು | | |
| 04 | ಎಮ್.ಗೋಪಿ | ಸದಸ್ಯರು | 3 | ಕಾರ್ಯಪಾಲಕ ಅಭಿಯಂತರರು, ( ರಸ್ತೆ & ಮೂಲಭೂತ, ಬೃ.ನಿ.ಗಾ-ಪೂರ್ವ, ಕೇಂದ್ರ ಯೋಜನೆ-2, ಟಿ.ಇ.ಸಿ.) |
| 05 | ಹೆಚ್.ನಾರಾಯಣ | ಸದಸ್ಯರು | | |
| 06 | ಸೀಮಾ ಖಾನಂ | ಸದಸ್ಯರು | | |
| 07 | ಮುನಿಸಂಜೀವಯ್ಯ | ಸದಸ್ಯರು | | |
| 08 | ಲೋಕೇಶ್ | ಸದಸ್ಯರು | | |
| 09 | ಎಂ.ಮುನಿಸ್ವಾಮಿ | ಸದಸ್ಯರು | | |
| 10 | ಕೆ. ಶಿವಕುಮಾರ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)

### 01] ವಿಷಯ ಸಂಖ್ಯೆಃ183/2011-12

ವಿಶೇಷ ಆಯುಕ್ತರವರು ದಿನಾಂಕಃ10-01-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಪಡುವ ಸರ್ಜಾಪುರದ ಹತ್ತಿರವಿರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 131, ರೈಲ್ವೆ ಕಿ.ಮೀ. 192/600-700 ಬಳಿ ರಸ್ತೆ ಮೇಲು ಸೇತುವೆ ಕಾಮಗಾರಿಯು ಪ್ರಸ್ತಾವನೆಯಲ್ಲಿದೆ. ಸದರಿ ಕಾಮಗಾರಿಯನ್ನು ನೈರುತ್ಯ ರೈಲ್ವೆ ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಂಟಿಯಾಗಿ ಹಣ ಹಂಚಿಕೆ ಆಧಾರದಲ್ಲಿ (Cost Sharing) ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಯ ಡಿ.ಪಿ.ಆರ್ ಗಳನ್ನು ಸಮಾಲೋಚಕರಾದ ಮೆ.// ಮಾನಸ ಕನ್ಸಲ್ಟೆಂಟ್ ರವರು ತಯಾರಿಸಿ ಸಿದ್ಧಪಡಿಸಿದ ಜಿ.ಎ.ಡಿಯನ್ನು ನೈರುತ್ಯ ರೈಲ್ವೆ ಇಲಾಖೆಗೆ ನೈರುತ್ಯ ರೈಲ್ವೆ ಇಲಾಖೆಯ ಮುಖ್ಯ ಅಭಿಯಂತರರು (ನಿರ್ಮಾಣ ಕೇಂದ್ರ) ಅನುಮೋದನೆ ನೀಡಿರುತ್ತಾರೆ. ಹಾಗೂ ರೈಲ್ವೆ ನಿಯಮಾವಳಿಗನುಗುಣವಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನುಮೋದನೆಗೆ ಸಲ್ಲಿಸಿರುತ್ತಾರೆ.

ನೈರುತ್ಯ ರೈಲ್ವೆ ಇಲಾಖೆಯು ಪಾಲಿಕೆಯ ಅನುಮೋದನೆಗಾಗಿ ಸಲ್ಲಿಸಿರುವ ಯೋಜನೆಯು ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

1. 17.00 ಮೀ. ಅಗಲದ 4 ಪಥಗಳುಳ್ಳ ರಸ್ತೆಯ ಮೇಲು ಸೇತುವೆ. (ಆರ್.ಓ.ಬಿ.)
2. ಮೇಲು ಸೇತುವೆಯು 8 ಪಿಯರ್‌ಗಳನ್ನು ಹೊಂದಿದ್ದು, ರೈಲ್ವೆ ಆಬ್ಲಿಗೇಟರಿ ಸ್ಪ್ಯಾನ್-36.00 ಮೀ. ಸರ್ಜಾಪುರದ ಕಡೆಗೆ ಸ್ಟಾಂಡರ್ಡ್ ಸ್ಪ್ಯಾನ್- 40.00 ಮೀ. ಗಳು ಹಾಗೂ ಬೆಂಗಳೂರು ಸಿಟಿ ಕಡೆಗೆ ಸ್ಟಾಂಡರ್ಡ್ ಸ್ಪ್ಯಾನ್ 80.00 ಮೀ. ಗಳನ್ನು ಒಳಗೊಂಡಿರುತ್ತದೆ.
3. 2.24 ಮೀ ಎತ್ತರದ composite girder ಹೊಂದಿರುತ್ತದೆ.

4. ಮೇಲು ಸೇತುವೆಯು ಇಳಿಜಾರು 1:20 ಅನುಪಾತದಲ್ಲಿ ಇದ್ದು, ಸರ್ಜಾಪುರದ ಕಡೆಯ ಅಪ್ರೋಚ್ ರಸ್ತೆಯು 116.00 ಮೀ. ಗಳು ಹಾಗೂ ಅಗರ ಗೇಟ್ ಕಡೆಯ ಅಪ್ರೋಚ್ ರಸ್ತೆಯು 87.64 ಮೀ. ಇರುತ್ತದೆ.
5. ಪಾದಾಚಾರಿಗಳು ರೈಲ್ವೆ ಹಳಿಯನ್ನು ದಾಟಲು ಮೇಲು ಸೇತುವೆಯ ಪಕ್ಕದಲ್ಲಿ ಅನುಕೂಲವಾಗುವಂತೆ ನಿಯಮಿತ ಎತ್ತರದ ಪಾದಚಾರಿ ಸುರಂಗ ಮಾರ್ಗ ನಿರ್ಮಾಣ ಮಾಡಲು ಪ್ರಸ್ತಾಪಿಸಲಾಗಿದೆ.
6. ರಸ್ತೆಯ ಮಟ್ಟದಲ್ಲಿ ರಸ್ತೆಯ ಎರಡೂ ಬದಿ 5.50 ಮೀ. ಅಗಲದ ಸರ್ವೀಸ್ ರಸ್ತೆಯ ನಿರ್ಮಾಣ.

ಈ ಎಲ್ಲಾ ಅಂಶಗಳನ್ನು ಒಳಗೊಂಡ ಯೋಜನೆಯನ್ನು ಕಾರ್ಯಗತಗೊಳಿಸಲು ಸುಮಾರು 1511.3 ಚ.ಮೀ. (16259.17 ಚದರ ಅಡಿ) ಗಳಷ್ಟು ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ.

ನೈರುತ್ಯ ರೈಲ್ವೆ ಇಲಾಖೆಯ ಅನುಮೋದಿತ ಜಿ.ಎ.ಡಿ. ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ರೈಲ್ವೆ ನಿಯಮಾವಳಿಗನುಸಾರವಾಗಿ ರೂ. 17,77,34,581.00 ಗಳಿಗೆ ತಯಾರಿಸಿ ಅನುಮೋದನೆಗಾಗಿ ಪಾಲಿಕೆಗೆ ಸಲ್ಲಿಸಿರುತ್ತಾರೆ. ಅಂದಾಜು ಪಟ್ಟಿಯು ಮೇಲು ಸೇತುವೆಯ ನಿರ್ಮಾಣ, ಅಪ್ರೋಚ್ ರಸ್ತೆ ನಿರ್ಮಾಣ, ಮೂಲಭೂತ ಸೌಕರ್ಯಗಳ ಸ್ಥಳಾಂತರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಅಂದಾಜು ಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

1. ಕಾಮಗಾರಿಗೆ ತಗಲುವ ಒಟ್ಟು ಮೊತ್ತ ರೂ. 1777.35 ಲಕ್ಷಗಳು
2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೈರುತ್ಯ ರೈಲ್ವೆ ಇಲಾಖೆಗೆ ಭರಿಸಬೇಕಾದ ಮೊತ್ತ ರೂ. 11,87.21 ಲಕ್ಷಗಳು
3. ನೈರುತ್ಯ ರೈಲ್ವೆ ಇಲಾಖೆಯವರು ತಮ್ಮ ಹಂಚಿಕೆ ಭಾಗದಲ್ಲಿ ಭರಿಸಬೇಕಾದ ಮೊತ್ತ ರೂ. 590.14 ಲಕ್ಷಗಳು.

ನೈರುತ್ಯ ರೈಲ್ವೆ ಇಲಾಖೆಯವರು ಸಲ್ಲಿಸಿರುವ ಅಂದಾಜುಪಟ್ಟಿಯನ್ನು ಪರಿಶೀಲಿಸಿದಾಗ ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಅಂದಾಜುಪಟ್ಟಿಯಲ್ಲಿ ಅಳವಡಿಸಿರುವ ಮೊತ್ತವು ಕಡಿಮೆಯಾಗಿದ್ದು, ಸದರಿ ಯೋಜನೆಗೆ ಹೆಚ್ಚುವರಿಯಾಗಿ ರೂ. 100.00 ಲಕ್ಷಗಳನ್ನು ಹಾಗೂ ರೂ. 326.00 ಲಕ್ಷಗಳನ್ನು ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಬೇಕಾದ ಖಾಸಗಿ ಭೂಮಿಯ ಭೂಸ್ವಾಧೀನ ಮಾಡಿಕೊಳ್ಳಲು ಪ್ರಾರಂಭಿಕ ಅನುದಾನವನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಗೆ 2009–10 ನೇ ಸಾಲಿನ ಆಯವ್ಯಯದಲ್ಲಿ ರೂ. 500 ಲಕ್ಷಗಳ ಅನುಧಾನ, 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 98.86 ಲಕ್ಷಗಳ ಅನುದಾನ ಹಾಗೂ 2011–12 ನೇ ಸಾಲಿನ ಆಯವ್ಯಯದಲ್ಲಿ ರೂ. 98.86 ಲಕ್ಷಗಳನ್ನು ಹಾಗೂ ಮುಂದುವರೆದ ಕಾಮಗಾರಿಗಳಿಗೆ 750.00 ಲಕ್ಷಗಳನ್ನು ಮೀಸಲಿಡಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದ ಫೋಸ್ವಾರೆ ಅಂದಾಜು ಪಟ್ಟಿಯನ್ನು ರೂ. 2220.00 ಲಕ್ಷಗಳಿಗೆ ತಯಾರಿಸಿದ್ದು ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತಿದೆ.

| | | |
|---|---|---|
| ಭಾಗ–1 | ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಬಾಕ್ಸ್ ಮತ್ತು ಅಪ್ರೋಚ್ ರಸ್ತೆ ಕಾಮಗಾರಿಯ ಅಂದಾಜು ಮೊತ್ತ | ರೂ. 17,77,34,581.00 |
| ಭಾಗ–2 | ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ ಪಡೆಸಿಕೊಳ್ಳಲು ಬೇಕಾಗುವ ಭೂ ಪರಿಹಾರದ ಅಂದಾಜು ಮೊತ್ತ | ರೂ. 3,26,00,000.00 |
| | ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ | ರೂ. 1,00,00,000.00 |
| | ವಿದ್ಯುಧೀಕರಣ ಕಾಮಗಾರಿಗಳಿಗೆ | ರೂ. 12,00,000.00 |
| | ಇತರೆ (lump sum) | ರೂ. 4,65,419.00 |
| | **ಒಟ್ಟು** | **ರೂ. 22,20,00,000.00** |

ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಅಂದಾಜು ಮೊತ್ತ ರೂ. 22,20,00,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಪಾಲಿಕೆ ವತಿಯಿಂದ ಭಾಗ-1 ರಲ್ಲಿ 11,87,21,079.00 ಗಳನ್ನು ರೈಲ್ವೆ ಇಲಾಖೆಗೆ ಠೇವಣಿ ಮಾಡುವ ಬಗ್ಗೆ ಆದೇಶ ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಅಂದಾಜು ಮೊತ್ತ ಭಾಗ-2 ರಲ್ಲಿ ವಿವರಿಸಿರುವಂತೆ ರೂ.4,42,65,419.00ಗಳಿಗೆ ಆಡಳಿತಾತ್ಮಕ ಅನುಮೋದನೆ.
3. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.
4. ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಂದಾಜುಪಟ್ಟಿಗೆ ಮೇಲುರುಜು ಮಾಡಿ ನೈರುತ್ತಯ ರೈಲ್ವೆ ಇಲಾಖೆಗೆ ಸಲ್ಲಿಸಲು ಅನುಮೋದನೆ ಹಾಗೂ ರೈಲ್ವೆ ಇಲಾಖೆಯವರು ಟೆಂಡರ್ ಅಹ್ವಾನ ಮಾಡಲು ಕೋರಿ ಅನುಮೋದನೆ.
5. ರೈಲ್ವೆ ಇಲಾಖೆಗೆ ಪಾಲಿಕೆಯಿಂದ ಪಾವತಿಸಬೇಕಾದ ಮೊತ್ತವನ್ನು ಪ್ರಗತಿಯ ಆಧಾರದ ಮೇಲೆ ಆಗಾಗ್ಗೆ ಪಾವತಿ ಮಾಡಲು ಅನುಮೋದನೆ.

ಮೇಲ್ಕಂಡ ಎಲ್ಲಾ ಅಂಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 10-01-2012ರ ವಿಶೇಷ ಆಯುಕ್ತರ ಟಿಪ್ಪಣಿ.

" ಮುಂದೂಡಿದೆ "

## 02] ವಿಷಯ ಸಂಖ್ಯೆಃ185/2011-12

ವಿಶೇಷ ಆಯುಕ್ತರವರು ದಿನಾಂಕಃ23-01-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 169ರ ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 200.00 ಲಕ್ಷಗಳಿಗೆ 2010-11ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ತಯಾರಿಸಿ ಅಗತ್ಯ ಅನುಮೋದನೆ ಪಡೆದು, ಕಾಮಗಾರಿ ಸಂಖ್ಯೆಃ 169-12-00001ರಂತೆ ಈಗಾಗಲೇ ಕಾಮಗಾರಿ ಸಂಕೇತ ಲಭ್ಯವಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆಃ ತೆಆಸ್ಥಾಸ/257/2010-11 ದಿನಾಂಕಃ 23-03-2011ರಂತೆ ಗೋಷ್ವಾರೆ 3ರಲ್ಲಿನ ಕ್ರಮ ಸಂಖ್ಯೆ 30ರಲ್ಲಿ ವಾರ್ಡ್ 169 ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ. 200.00 ಲಕ್ಷಗಳಿಗ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 23-01-2012ರ ವಿಶೇಷ ಆಯುಕ್ತರ ಟಿಪ್ಪಣಿ.

" ಮುಂದೂಡಿದೆ "

## 03] ವಿಷಯ ಸಂಖ್ಯೆಃ193/2011-12

ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಶೇಷಾದ್ರಿ ರಸ್ತೆಯಲ್ಲಿರುವ ಹಳೇ ಕೇಂದ್ರ ಕಾರಾಗೃಹವನ್ನು ತೆರವುಗೊಳಿಸಿ ಹೊಸ ವಿನ್ಯಾಸದೊಂದಿಗೆ ಉದ್ಯಾನವನ ನಿರ್ಮಿಸಿದ್ದು, ಅದಕ್ಕೆ " **ಸ್ವಾತಂತ್ರ್ಯ ಉದ್ಯಾನವನ** "ವೆಂದು ನಾಮಕರಣ ಮಾಡಲಾಗಿದ್ದು, ಸಾರ್ವಜನಿಕರಿಗೆ ವಾಯುವಿಹಾರ ಮತ್ತು ಕಣ್ಮನಗಳಿಗೆ ಆನಂದದ ವಾತಾವರಣ ಉಂಟಾಗುವಂತೆ ಮರುಸೃಷ್ಟಿಸಲಾಗಿದೆ. ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 198 ವಾರ್ಡ್‌ಗಳಲ್ಲಿ 2011ರ ಜನಗಣತಿ ಪ್ರಕಾರ ಜನಸಂಖ್ಯೆ 95,88,910 ಲಕ್ಷಗಳು ಜನಸಂಖ್ಯೆ ಹೆಚ್ಚಳದ ಜೊತೆ ಜೊತೆಯಲ್ಲಿ ಅಧಿಕ ಕಟ್ಟಡಗಳು ನಿರ್ಮಾಣವಾಗುತ್ತಿದ್ದು ವಾಹನ ದಟ್ಟಣೆಯೂ ಸಹ ಅತಿಯಾಗಿ ಬೆಳೆಯುತ್ತಿದೆ. ಸ್ವಾತಂತ್ರ್ಯ

ಉದ್ಯಾನವನದ ಸುತ್ತಮುತ್ತಲ ಪ್ರದೇಶಗಳಾದ ಬಳೆಪೇಟೆ, ಚಿಕ್ಕಪೇಟೆ ಮತ್ತು ಗಾಂಧಿನಗರಗಳಲ್ಲಿಯೂ ಸಹ ವಾಹನ ನಿಲುಗಡೆಗೆ ಸೂಕ್ತ ನಿಲ್ದಾಣವಿಲ್ಲದೆ ಅಡ್ಡಾದಿಡ್ಡಿಯಾಗಿ ವಾಹನ ನಿಲ್ಲಿಸುತ್ತಿದ್ದು ಸಾರ್ವಜನಿಕರು ರಸ್ತೆಯಲ್ಲಿ ಸಂಚರಿಸಲು ಪರದಾಡುವಂತಾಗಿದೆ. ಆದ್ದರಿಂದ ನಗರದ ಕೇಂದ್ರ ಪ್ರದೇಶವಾದ ಗಾಂಧಿನಗರದಲ್ಲಿ, ಕೇಂದ್ರ ಕಾರಾಗೃಹದ 20 ಎಕರೆ ಪ್ರದೇಶದಲ್ಲಿ ಮೇಲೆ ತಿಳಿಸಿರುವಂತೆ 15 ಎಕರೆಗಳ ಸ್ವಾತಂತ್ರ್ಯ ಉದ್ಯಾನವನವಿದ್ದು, ಉಳಿದಿರುವ 5 ಎಕರೆ ಪ್ರದೇಶದ ಆವರಣದಲ್ಲಿ ಸಮಾಲೋಚಕರ ವಿನ್ಯಾಸದಂತೆ ಕಾಳಿದಾಸ ರಸ್ತೆಯ ಬದಿಯಲ್ಲಿ 60ಮೀ ಅಗಲ ಮತ್ತು 360ಮೀಟರ್ ಉದ್ದದ ಭಾಗದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಒಂದನೇ ಹಾಗೂ ಎರಡಯೇ ತಳ ಅಂತಸ್ತಿನ ವಾಹನ ನಿಲ್ದಾಣ ನಿರ್ಮಾಣಕ್ಕಾಗಿ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ.

13ನೇ ಹಣಕಾಸು ಯೋಜನೆ ಅಡಿ ಗಾಂಧಿನಗರ ಕಾಳಿದಾಸ ರಸ್ತೆ ಸ್ವಾತಂತ್ರ್ಯ ಉದ್ಯಾನವನದ ಬದಿಯ ಖಾಲಿ ನಿವೇಶನದಲ್ಲಿ ಬಹುಮಹಡಿ ವಾಹನ ನಿಲ್ದಾಣ ಸಂಕೀರ್ಣ ನಿರ್ಮಿಸಲು 2110–11ನೇ ಸಾಲಿನ ಆಯವ್ಯಯದಲ್ಲಿ 40 ಕೋಟಿ ರೂಪಾಯಿಗಳ ಅನುದಾನ ಲಭ್ಯವಿರುತ್ತದೆ. ಮೂಲ ಯೋಜನೆ ಅಂದರೆ ಮಾರ್ಚ್ 2004ರಲ್ಲಿ ಕೈಗೊಂಡ ಸ್ವಾತಂತ್ರ್ಯ ಉದ್ಯಾನವನದ ಅಭಿವೃದ್ಧಿಗೆ ರಾಷ್ಟ್ರ ಮಟ್ಟ ವಿನ್ಯಾಸ ಸ್ಪರ್ದೆಯಲ್ಲಿ ಆಯ್ಕೆಗೊಂಡ M/s. Methew and Ghosh ರವರನ್ನು ಸಮಾಲೋಚಕರನ್ನಾಗಿ ನಿಯೋಜಿಸಿದ್ದು, ಸದರಿ ಕಾಮಗಾರಿಯಲ್ಲಿ Construction of Multi Level Car Parking @ Freedom Park ಕಾಮಗಾರಿಯೂ ಸಹ ಸೇರಿರುತ್ತದೆ. ಸದರಿ ಸಮಾಲೋಚಕರ ಸೇವೆಯನ್ನು ಈಗ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ Multi Level Car Parking ಕಾಮಗಾರಿಗೆ ಮುಂದುವರೆಸಲು ಮಾನ್ಯ ಆಯುಕ್ತರವರಿಂದ ದಿನಾಂಕಃ 27–04–2011ರಂದು ಅನುಮೊದನೆ ಪಡೆಯಲಾಗಿದೆ.

ಗಾಂದಿನಗರ ಕಾಳಿದಾಸ ರಸ್ತೆಯ ಸ್ವಾತಂತ್ರ್ಯ ಉದ್ಯಾನವನದ ಬದಿಯ ಖಾಲಿ ನಿವೇಶನದಲ್ಲಿ ಬಹುಮಹಡಿ ವಾಹನ ನಿಲ್ದಾಣ ಸಂಕೀರ್ಣ ನಿರ್ಮಿಸುವ ಸಂಬಂಧ M/s. Methew and Ghosh ರವರನ್ನು ಸಮಾಲೋಚಕರು ದಿನಾಂಕಃ 24–08–2011ರಂದು Power Point presentation ಅನ್ನು ವಿಶೇಷ ಆಯುಕ್ತರು(ಯೋಜನೆ) ಪ್ರಧಾನ ಅಭಿಯಂತರರು, ಮಾನ್ಯ ಆಯುಕ್ತರವರ ತಾಂತ್ರಿಕ ಸಲಹೆಗಾರರು, ಮುಖ್ಯ ಅಭಿಯಂಗತರರು (ಟಿ.ವಿ.ಸಿ.ಸಿ.) ಹಾಗೂ ಪಾಲಿಕೆಯ ಅಧಿಕಾರಿಗಳ ಸಮ್ಮುಖದಲ್ಲಿ ಈ ಕೆಳಕಂಡ 4 ಪ್ರಸ್ತಾವನೆಗಳನ್ನು ಪ್ರಸ್ತುತ ಪಡಿಸಲಾಯಿತು. ಅವುಗಳ ವಿವರ ಈ ಕೆಳಕಂಡಂತಿವೆ. ನಿವೇಶನದ ಅಳತೆ: 60X270 ಮೀ= 16,200 ಕಿ.ಮೀ.

| ಕ್ರ. ಸಂ | ವಿವರಗಳು | ಪ್ರಸ್ತಾವನೆ IA Without Automated arrangements & As per rock Strata revealed | ಪ್ರಸ್ತಾವನೆ IB Automated Car Parking(with provision only) | ಪ್ರಸ್ತಾವನೆ 2 Hard Rock Strata drilling | ಪ್ರಸ್ತಾವನೆ 3 Area below Ramachandra Road | ಷರ |
|---|---|---|---|---|---|---|
| 1) | ಅಂದಾಜು ಮೊತ್ತ | ರೂ. 56 ಕೋಟಿ | ರೂ.65.00 ಕೋಟಿ | ರೂ.79ಕೋಟಿ | ರೂ.85 ಕೋಟಿ | |
| 2) | **Total Built up area**<br>a) Basement I<br>b) Basement II<br>**Surfacce Area** | 17,145 sqm<br>10,056 sqm<br>6,601 sqm | 17,145 sqm<br>10,056 sqm<br>6,601 sqm | 16,936 sqm<br>16,936 sqm<br>6,850 sqm | 16,936 sqm<br>18,122 sqm<br>6,850 sqm | |

| | | | | | | |
|---|---|---|---|---|---|---|
| 3) | <u>**ವಾಹನ ನಿಲುಗಡೆ**</u><br>a) ಕಾರುಗಳು<br>b) ದ್ವಿಚಕ್ರ ವಾಹನಗಳು<br>c) ಬಸ್ಸುಗಳು | 429<br>482<br>20 | 720<br>482<br>20 | 575<br>482<br>20 | 590<br>482<br>20 | ಪ್ರಸ್ತಾವನೆ IB ನಲ್ಲಿ ಖರ್ಚು ವೆಚ್ಚಗಳ ಆರ್ಥಿಕ ಸಮತೋಲನ ವಿದ್ದು ಅದನ್ನು ಅಳವಡಿಸಿಕೊಳ್ಳ ಬಹುದಾಗಿರುತ್ತ ದೆ. |
| 4) | ಉಪಯುಕ್ತತೆ | ಕಡಿಮೆ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಬಹುದಾಗಿದ್ದ ವೆಚ್ಚವು ಸಹ ಕಡಿಮೆಯಾಗಿರುತ್ತದೆ. | ಈ ವ್ಯವಸ್ಥೆಗೆ ಹೆಚ್ಚುವರಿ ಕಾರುಗಳ ನಿಲುಗಡೆಗೆ ಅವಕಾಶವಿರುತ್ತದೆ | ಹೆಚ್ಚುವರಿ ಕಾರುಗಳ ನಿಲ್ದಾಣ (136) | ಹೆಚ್ಚುವರಿ ಕಾರುಗಳ ನಿಲ್ದಾಣ (161) | |
| 5) | ಅನುಪಯುಕ್ತತೆ | ಆಳದಲ್ಲಿ ಕಲ್ಲುಬಂಡೆಯಿಂದ ಹೆಚ್ಚು ವಾಹನಗಳ ನಿಲುಗಡೆ ಅವಕಾಶ ಕಲ್ಪಿಸಲಾಗುವುದಿಲ್ಲ. | ಸ್ವಯಂ ಚಾಲಿತ ವ್ಯವಸ್ಥೆಯಿಂದ ಹೆಚ್ಚು ಖರ್ಚು | ಆಳದಲ್ಲಿನ ಕಲ್ಲು ಬಂಡೆ ಕೊರೆಯಲು ಹೆಚ್ಚು ಅವಧಿ ಮತ್ತು ಹೆಚ್ಚು ಖರ್ಚು (25 ಕೋಟಿ) | ರಾಮಚಂದ್ರ ರಸ್ತೆ ಕೆಳಭಾಗದಲ್ಲಿನ ಕೆಲಸದಿಂದಾಗಿ ಆ ರಸ್ತೆ ಎರಡು ವರ್ಷ ಅನುಪಯುಕ್ತ ವಾಗಿರುತ್ತದೆ. | |

Power point presentation (PPP) ಮೂಲಕ ಪ್ರಸ್ತುತಪಡಿಸಿದಾಗ ಮೇಲ್ಕಂಡ ಪಸ್ತಾವನೆಗಳಾದ 1A, 1B, 2 ಮತ್ತು 3 ಗಳಲ್ಲಿ ಪ್ರಸ್ತಾವನೆ 1B ಹೆಚ್ಚು ಸೂಕ್ತವಾಗಿದೆ ಎಂಬ ಅಭಿಪ್ರಾಯವನ್ನು ವಿಶೇಷ ಆಯುಕ್ತರು(ಯೋಜನೆ) ರವರು, ಪ್ರಧಾನ ಅಭಿಯಂತರರು, ಮಾನ್ಯ ಆಯುಕ್ತರವರ ತಾಂತ್ರಿಕ ಸಲಹೆಗಾರರು ಮುಖ್ಯ ಅಭಿಯಂತರರು (ಟಿ.ವಿ.ಸಿ.ಸಿ.) ಮತ್ತು ಅಧೀಕ್ಷಕ ಅಭಿಯಂತರರು (ಟಿ.ವಿ.ಸಿ.ಸಿ.) ರವರು ವ್ಯಕ್ತಪಡಿಸಿರುತ್ತಾರೆ. ಅದರಂತೆ M/s. Methew and Ghosh ರವರು ಈ ಕೆಳಕಂಡ ಅಂಶಗಳನ್ನು ಅಳವಡಿಸಿ ರೂ. 80–12 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಅಂದಾಜಿನಲ್ಲಿ ಅಳವಡಿಸಿಕೊಂಡಿರುವ ಅಂಶಗಳು ಈ ಕೆಳಕಂಡಂತಿರುತ್ತವೆ.

| Sl.No | PARTICULARS | Cost in Rs. |
|---|---|---|
| 1 | CIVIL WORKS | 572,200,000.00 |
| 2 | ELECTRICAL, SECURITY FIRE ALARM WORKS | 35,100,000.00 |
| 3 | PUMBLING AND SANITARY WORKS | 3,400,000.00 |
| 4 | IRRIGATION WORKS | 1,600,000.00 |
| 5 | FIRE FIGHTING AND SPRINKLER SYSTEM | 12,700,000.00 |
| 6 | MECHANICAL VENTIKATION SYSTEM | 25,000,000.00 |
| | Total Cost Rs. | 650,000,000.00 |
| 7 | AUTOMATION SYSTEM FOR 720 CARS @ 210000/car | 151,200,000.00 |
| | TOTAL COST OF PROJECT WITH AUTOMATION OF CARS RS. | 801,200,000.00 |

ಸದರಿ ಪ್ರಸ್ತಾವನೆಯಲ್ಲಿ ಭವಿಷ್ಯದಲ್ಲಿ automated car parking ವ್ಯವಸ್ಥೆ ಅಳವಡಿಸಲು ಅನುವಾಗುವಂತೆ ನೆಲಮಹಡಿಯ ಕಟ್ಟಡದ ಎತ್ತರವನ್ನು ವಿನ್ಯಾಸಗೊಳಿಸಲಾಗಿದೆ. ಆದುದರಿಂದ ಈ ಪ್ರಸ್ತಾವನೆ ವೆಚ್ಚ ರೂ. 65.00 ಕೋಟಿಗಳಾಗುತ್ತದೆ. automated car parking ಯಂತ್ರೋಪಕರಣಗಳನ್ನು ಅಳವಡಿಸಿಕೊಂಡಲ್ಲಿ ತಗಲುವ ವೆಚ್ಚ ರೂ. 80.12 ಕೋಟಿಗಳಾಗುತ್ತದೆ. ಈ ಕಾಮಗಾರಿಗೆ ತಗಲುವ ವೆಚ್ಚವನ್ನು 13ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಭರಿಸಬಹುದಾಗಿದೆ. 13ನೇ ಹಣಕಾಸು ಆಯೋಗಕ್ಕೆ ಸದರಿ ಯೋಜನೆಯ ಟಿ.ಪಿ.ಆರ್‌ಅನ್ನು ಸಲ್ಲಿಸಿ ಪ್ರಸ್ತುತ ವರ್ಷದ ಅನುದಾನ ಬಿಡುಗಡೆ ಮಾಡಲು ಕೋರಲಾಗಿದೆ.

1) 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಗಾಂಧಿನಗರ ಕಾಳಿದಾಸ ರಸ್ತೆ ಸ್ವಾತಂತ್ರ್ಯ ಉದ್ಯಾನವನದ ಬದಿಯ (ಹಳೆಯ ಕೇಂದ್ರ ಕಾರಾಗೃಹದ ಆವರಣದಲ್ಲಿ) ಒಂದು ಹಾಗೂ ಎರಡನೇ ತಳ ಅಂತಸ್ತಿನ ವಾಹನ ನಿಲುಗಡೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಮಲೋಚಕರಾದ M/s. Methew and Ghosh ರವರು ಸಲ್ಲಿಸಿರುವ ಕಾಮಗಾರಿಯ ಒಟ್ಟು ಮೊತ್ತ ರೂ. 80.12 ಕೋಟಿಗಳ D.P.Rಗೆ ಆಡಳಿತಾತ್ಮಕ ಅನುಮೋದನೆ.

2) ಸದರಿ ಕಾಮಗಾರಿಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.

3)ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಸದರಿ ಕಾಮಗಾರಿಗೆ ಟೆಂಡರ್ ಕರೆಯಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಆಯುಕ್ತರವರ ಟಿಪ್ಪಣಿ.

**ತೀರ್ಮಾನಃ ತಾ: 07-02-2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು ಹಾಗೂ ವಿಷಯವನ್ನು ಕೌನ್ಸಿಲ್ ಸಭೆ ಮುಂದೆ ತಂದು ನಿರ್ಣಯ ಪಡೆಯಲು ಸಭೆಯು ತೀರ್ಮಾನಿಸಿತು.**

## 04] ವಿಷಯ ಸಂಖ್ಯೆಃ194/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Development of modern footpath, Ist main road (Manjunathanagara right side) from west of chord roads to Thimmaiah road in ward No:99 ಕಾಮಗಾರಿಯ ಅಂದಾಜು ರೂ. 50.00ಲಕ್ಷಗಳಿಗೆ 2010-11ನೇ ಸಾಲಿನ ಆಯವ್ಯಯದ ಪಿ-ಕೋಡ್ 2193ರಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸಿ ಜಾಬ್ ಕೋಡ್ ಸಂಖ್ಯೆ 099-11-000057 ನೀಡಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಮಳೆಗಾಲಕ್ಕೆ ಮುನ್ನ ಪೂರ್ಣಗೊಳಿಸಬೇಕೆಂದು ಮತ್ತು ತುರ್ತಾಗಿ ಕೈಗೆತ್ತಿಕೊಳ್ಳಬೇಕಿರುವ ಹಿನ್ನಲೆಯಲ್ಲಿ ಕೆ.ಆರ್.ಐ.ಡಿ.ಎಲ್. ವತಿಯಿಂದ ಕೂಡಲೇ ನಿರ್ವಹಿಸಲು ನಗರ ಪಾಲಿಕೆಯ ಸದಸ್ಯರು ತಮ್ಮ ಪತ್ರದಲ್ಲಿ ಕೋರಿದ್ದು ಈ ಸಂಬಂಧವಾಗಿ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನಃ ವಿಶೇಷ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.**

## 05] ವಿಷಯ ಸಂಖ್ಯೆಃ195/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕಃ 08-12-2010ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೈಸೂರು ರಸ್ತೆ ಮತ್ತು ಪಾದರಾಯನಪುರ-ಹೊಸಹಳ್ಳಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ಥಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿರುವ ಮುಸ್ಲಿಂ ಸ್ಮಶಾನದ ಪ್ರದೇಶದಲ್ಲಿ ರಸ್ತೆ ಅಗಲೀಕರಣಕ್ಕೆ ಅಗತ್ಯವಿರುವ ಸ್ಮಶಾನದ ಜಾಗವನ್ನು ಸ್ವಾಧೀನಪಡಿಸಿಕೊಂಡು ಹಾಗೆ ಕೆಡವಲಾಗುವ ಕಾಂಪೌಂಡ್ ಗೋಡೆ ಮತ್ತು ಈಗಾಗಲೇ ನಿರ್ಮಿಸಿರುವ ನೀರಿನ ಟ್ಯಾಂಕ್‌ಅನ್ನು ಪಾಲಿಕೆವತಿಯಿಂದ ನಿರ್ಮಿಸಿಕೊಡುವ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದ ಮೇರೆಗೆ Dismantling of existing compound wall and construction of new size stone masonry compound wall and construction of over head tank with water supply facility in the premises of Muslim Burial ground in Mysore road ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ದರಗಳನ್ನಾಧರಿಸಿ ತಯಾರಿಸಿದ ರೂ. 34.00 ಲಕ್ಷಗಳ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಮಾನ್ಯ ಆಯುಕ್ತರು ದಿನಾಂಕಃ10-01-2011ರಂದು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ರೂ. 34.00ಲಕ್ಷಗಳ

ಕಾಮಗಾರಿಗೆ P-0541 ಲೆಕ್ಕ ಶೀರ್ಷಿಕೆಯಲ್ಲಿ ಜಾಬ್ ನಂಬರ್ 136-11-000019ರಂತೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆದ್ದರಿಂದ ಸದರಿ ಕಾಮಗಾರಿಯು ತುರ್ತಾದ್ದರಿಂದ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗುತ್ತಿರುವುದರಿಂದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಪ್ರಗತಿಯಲ್ಲಿರುವ ಕಾಮಗಾರಿಯ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**" ಮುಂದೂಡಿದೆ "**

## 06] ವಿಷಯ ಸಂಖ್ಯೆ:196/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೈಸೂರು ರಸ್ತೆಯ ಸಿರ್ಸಿ ವೃತ್ತದಿಂದ ಹೊರವರ್ತುಲ ರಸ್ತೆಯವರೆಗೆ (ಸರಪಳಿ 0.00 ಕಿ.ಮೀ.ಯಿಂದ 3.70 ಕಿ.ಮೀ ವರೆಗೆ) ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ವಹಿಸಲಾಗುತ್ತಿದೆ. ಟೆಂಡರ್ ಕಾಮಗಾರಿಯಲ್ಲಿ ರಸ್ತೆಯ ನಿರ್ವಹಣೆಗಾಗಿ ಯಾವುದೇ ಅವಕಾಶ ಕಲ್ಪಿಸದ ಕಾರಣ ಮಳೆಯಿಂದಾಗಿ ಹಾಗೂ ಹೆಚ್ಚಿನ ವಾಹನ ದಟ್ಟಣೆಯಿಂದ ಹಾಲಿ ಇರುವ ಡಾಂಬರು ರಸ್ತೆಯ ಮೇಲ್ಭಾಗದಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿರುತ್ತದೆ.

ಮೇಲಿನ ಸಂದರ್ಭದಲ್ಲಿ ಮೈಸೂರು ರಸ್ತೆಯ ಸರಪಳಿ 0.00 ಕಿ.ಮೀ ಯಿಂದ 3.70 ಕಿಮೀ. ವರೆಗೆ ರಸ್ತೆಯ ನಿರ್ವಹಣೆಗಾಗಿ Pot hole filling ಕಾಮಗಾರಿಯನ್ನು ನಿರ್ವಹಿಸಲು ಅಧೀಕ್ಷಕ ಅಭಿಯಂತರರ ಸೂಚನೆ ಮೇರೆಗೆ 2011-12ನೇ ಸಾಲಿನ ದರಗಳನ್ವಯ ರೂ., 15.00 ಲಕ್ಷಗಳಿಗೆ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ ನಿರ್ವಹಿಸಲು ಮಾನ್ಯ ಆಯುಕ್ತರು ದಿನಾಂಕಃ 28-05-2011ರಂದು ಅನುಮೋದನೆಯನ್ನು ನೀಡಿದ್ದು ಸದರಿ ಕಾಮಗಾರಿಗೆ ಜಾಬ್ ಕೋಡ್ ಹಾಗೂ ಸರ್ಟಿಫಿಕೇಟ್ ಅನ್ನು ಜಾಬ್ ನಂಬರ್ 309-12-000005 ಪಡೆಯಲಾಗಿರುತ್ತದೆ.

ದಿನಾಂಕಃ 06-06-2011ರಂದು ಸಂಜೆ ಸನ್ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯಾಲಯದಿಂದ ಮುಖ್ಯ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ, ಬಿ.ಬಿ.ಎಂ.ಪಿ. ರವರಿಗೆ ಬಂದ ದೂರವಾಣಿ ಕರೆಯ ಮೇರೆಗೆ ಮೈಸೂರು ರಸ್ತೆಯಲ್ಲಿ ಇತ್ತೀಚಿನ ಮಳೆಯಿಂದಾಗಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಎರಡು ದಿನಗಳೊಳಗೆ ಮುಚ್ಚಿ ಸಾರ್ವಜನಿಕರ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲು ಸೂಚಿಸಿರುವ ಮೇರೆಗೆ ಕೂಡಲೇ ಮೈಸೂರು ರಸ್ತೆಯ ಸಿರ್ಸಿ ವೃತ್ತದಿಂದ ವೆಸ್ಟ್ ಆಫ್ ಕಾಡ್ ರಸ್ತೆಯವರೆಗೆ Pot hole filling ಕಾಮಗಾರಿಯನ್ನು ನಿರ್ವಹಿಸಲು ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರು ಆದೇಶಿಸಿರುವ ಮೇರೆಗೆ Pot hole filling ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

ಆದ್ದರಿಂದ ಮೈಸೂರು ರಸ್ತೆಯ ಸರಪಳಿ 0.00 ಕಿಮೀ. ಯಿಂದ 3.70 ಕಿ.ಮೀ. ವರೆಗೆ ರಸ್ತೆಯ Pot hole filling ಕಾಮಗಾರಿಯು ತುರ್ತಾದ್ದರಿಂದ ಈಗಾಗಲೇ ಮಾನ್ಯ ಆಯುಕ್ತರು ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗಿರುವುದನ್ನು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗಿರುವ ಕಾಮಗಾರಿಯ ಸ್ಥಿರೀಕರಣದ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನಃ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿ, ಈಗಾಗಲೇ ಕಾಮಗಾರಿ ನಿರ್ವಹಿಸಿರುವುದನ್ನು ಸ್ಥಿರೀಕರಿಸಲು ಮಿತಿಯು ತೀರ್ಮಾನಿಸಲಾಯಿತು.**

## 07] ವಿಷಯ ಸಂಖ್ಯೆ:197/2011–12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 08–12–2010ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೈಸೂರು ರಸ್ತೆ ಮತ್ತು ಪಾದರಾಯನಪುರ–ಹೊಸಹಳ್ಳಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ಥಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿರುವ ಕ್ರಿಶ್ಚಿಯನ್ ಸ್ಮಶಾನದ ಪ್ರದೇಶದಲ್ಲಿ ರಸ್ತೆ ಅಗಲೀಕರಣದ ಸಲುವಾಗಿ ಸುಮಾರು 6000 ಚದರಡಿಗಳ ಜಾಗದ ಅಗತ್ಯವಿದ್ದು ಇದರಿಂದಾಗಿ ಭಾದಿತಗೊಳ್ಳುವ ಸಮಾಧಿಗಳನ್ನು ಸ್ಥಳಾಂತರಿಸಲು ಪರ್ಯಾಯ ಜಾಗವನ್ನು ಕೋರಿದ್ದ ಮೇರೆಗೆ ಗೋರಿಪಾಳ್ಯದ ವಿದ್ಯುತ್ ಚಿತಾಗಾರದ ಪಕ್ಕದಲ್ಲಿರುವ ಸುಮಾರು 4,500 ಚರಡಿಗಳ ಜಾಗವನ್ನು ನೀಡಲು ಉದ್ದೇಶಿಸಿ ಮೈಸೂರು ರಸ್ತೆ ಅಗಲೀಕರಣಕ್ಕೆ ಅಗತ್ಯವಿದ್ದ ಜಾಗ ಸ್ವಾಧೀನಪಡಿಸಿಕೊಂಡು ಹಾಗೆ ಕೆಡವಲಾಗುವ ಕಾಂಪೌಂಡ್ ಗೋಡೆಯನ್ನು ಪಾಲಿಕೆವತಿಯಿಂದ ನಿರ್ಮಿಸಿಕೊಡುವ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಮೇರೆಗೆ Dismantling of existing compound wall and construction of new size stone masonry compound wall to the premises of Christan Cemetry in Mysore road ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2010–11ನೇ ಸಾಲಿನ ದರಗಳನ್ನಾಧರಿಸಿ ತಯಾರಿಸಿದ ರೂ. 20.00 ಲಕ್ಷಗಳ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಮಾನ್ಯ ಆಯುಕ್ತರು ದಿನಾಂಕ:10-01–2011ರಂದು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ರೂ. 20.00ಲಕ್ಷಗಳ ಕಾಮಗಾರಿಗೆ P-0541 ಲೆಕ್ಕ ಶೀರ್ಷಿಕೆಯಲ್ಲಿ ಜಾಬ್ ನಂಬರ್ 141–11–000018ರಂತೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆದ್ದರಿಂದ ಸದರಿ ಕಾಮಗಾರಿಯು ತುರ್ತಾದ್ದರಿಂದ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗುತ್ತಿರುವುದರಿಂದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಪ್ರಗತಿಯಲ್ಲಿರುವ ಕಾಮಗಾರಿಯ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**“ ಮುಂದೂಡಿದೆ “**

## 08] ವಿಷಯ ಸಂಖ್ಯೆ:198/2011–12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ :127 (ಮೂಡಲಪಾಳ್ಯ) ರಲ್ಲಿ ಬರುವ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಿಕೊಡುವಂತೆ ಮಾನ್ಯ ನಗರ ಪಾಲಿಕೆ ಸದಸ್ಯರು ಹಾಗೂ ಮಾಜಿ ಉಪಮೇಯರ್ ಆದ ಶ್ರೀಮತಿ. ಶಾಂತಕುಮಾರಿಯವರು ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ತೀವ್ರತರವಾಗಿ ಹದಗೆಟ್ಟಿರುವ ರಸ್ತೆಗಳಿಗೆ ಡಾಂಬರೀಕರಣ ಕೈಗೊಳ್ಳುವಂತೆ ಕೋರಿದ್ದರ ಮೇರೆಗೆ Asphalting to roads in Moodalapalya in ward -127 ಕಾಮಗಾರಿಯ ಅಂದಾಜುಮೊತ್ತ ರೂ. 224.00ಲಕ್ಷಗಳಿಗೆ ಕಾಮಗಾರಿ ಸಂಕೇತ ದೊರೆತಿದ್ದು ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರ ಟಿಪ್ಪಣಿಯಂತೆ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.**

## 09] ವಿಷಯ ಸಂಖ್ಯೆಃ199/2011–12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, C-100 ಛಲಘಟ್ಟ ಮುಖ್ಯ ಕಣಿವೆಗೆ ವಾರ್ಡ್ ಸಂಖ್ಯೆಃ 114 ರಲ್ಲಿನ ಗೌತಮ್‌ಪುರ ಫುಟ್‌ಬಾಲ್ ಸ್ಟೇಡಿಯಂ ಬಳಿ ಹರಿಯುತ್ತಿರುವ ಸೆಕೆಂಡರಿ ಕಣಿವೆಯಾದ 'N4' New drain ISRO Layout ಬಳಿ ಬಂದು ಸೇರುತ್ತದೆ. ಗೌತಮ್‌ಪುರ ಫುಟ್‌ಬಾಲ್ ಸ್ಟೇಡಿಯಂ ಹಾಗೂ ದೀನಬಂಧು ನಗರ ಬಳಿ ಹರಿಯುತ್ತಿರುವ 'N4' ಚರಂಡಿಯಲ್ಲಿ ಕಲ್ಲು ಕಟ್ಟಡದ ತಡೆಗೋಡೆ ಬಿದ್ದು ಹೋಗಿದ್ದು, ಸಾರ್ವಜನಿಕ ಓಡಾಟಕ್ಕೆ ಅಪಾಯಕಾರಿಯಾಗಿ ಪರಿಣಮಿಸಿದೆ. ಆದ್ದರಿಂದ ತುರ್ತಾಗಿ Construction of RCC box and 'U' shape drain to new drain 'N4' at Gowthampura near foot ball stadium, Bangalore in C.V.P-II ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಫುಟ್‌ಬಾಲ್ ಸ್ಟೇಡಿಯಂ ಬಳಿ ಶಾಶ್ವತ ಸ್ಟೇಡಿಯಂ ನಿರ್ಮಿಸಲು ಉದ್ದೇಶಿಸಿರುವುದರಿಂದ ಸದರಿ ಪ್ರದೇಶದಲ್ಲಿ ಬಾಕ್ಸ್ ಡ್ರೈನ್ ನಿರ್ಮಿಸಲು ಹಾಗೂ ಕೆಳ ಭಾಗದಲ್ಲಿನ ದೀನಬಂಧು ನಗರದಲ್ಲಿ ಕಣಿವೆಯ ಅಗಲೀಕರಣ ಹಾಗೂ ಆಳ ಮಾಡಿ 'U' Shape ಡ್ರೈನ್ ನಿರ್ಮಿಸಲು ಉದ್ದೇಶಿಸಲಾಗಿದೆ. ಮೇಲ್ಕಂಡ ಕಾಮಗಾರಿಗೆ KPWD 2010-11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ₹ 165.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂಜ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕಃ 24–08–2011ರಂದು ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 09–09–2011ರಂದು ಕೆಳಕಂಡಂತೆ ಇಬ್ಬರು ಬಿದ್ದುದಾರರು ಟೆಂಡರ್ ಸಲ್ಲಿಸಿರುತ್ತಾರೆ.

1. ಶ್ರೀ.ಎಸ್.ಕೆ.ಪಳನಿ, ಮೆ: ವೈಷ್ಣವಿ ಎಂಟರ್ ಪ್ರೈಸಸ್, ಬೆಂಗಳೂರು.
2. ಶ್ರೀ. ಟಂಟಂ ಪೆದ್ದಗುರುವ ರೆಡ್ಡಿ, ಬೆಂಗಳೂರು.

ಮೇಲ್ಕಂಡ ಇಬ್ಬರು ಗುತ್ತಿಗೆದಾರರು ಸಲ್ಲಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಇಬ್ಬರು ಗುತ್ತಿಗೆದಾರರನ್ನು ಅರ್ಹರೆಂದು ಘೋಷಿಸಿದ ನಂತರ ಇವರುಗಳು ಸಲ್ಲಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕಃ 03–10–2011ರಂದು ತೆರೆಯಲಾಗಿ ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

1. ಶ್ರೀ.ಎಸ್.ಕೆ.ಪಳನಿ, ಮೆ: ವೈಷ್ಣವಿ ಎಂಟರ್ ಪ್ರೈಸಸ್, ಬೆಂಗಳೂರು.= ರೂ. 1,56,84,527.00
2. ಶ್ರೀ. ಟಂಟಂ ಪೆದ್ದಗುರುವ ರೆಡ್ಡಿ, ಬೆಂಗಳೂರು. = ರೂ. 1,68,75,348.00

ಕಡಿಮೆ ಬಿಡ್ಡುದಾರರಾಗಿರುವ ಶ್ರೀ. ಎಸ್.ಕೆ.ಪಳನಿ, ಮೆ: ವೈಷ್ಣವಿ ಎಂಟರ್‌ಪ್ರೈಸಸ್‌ರವರು ನಮೂದಿಸಿರುವ ಮೊತ್ತವು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 2.56 ರಷ್ಟು ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿ ಕಡಿಮೆ ಬಿಡ್ಡುದಾರರಾಗಿರುವ ಶ್ರೀ. ಎಸ್.ಕೆ.ಪಳನಿ, ಮೆಃ ವೈಷ್ಣವಿ ಎಂಟರ್‌ಪ್ರೈಸಸ್‌ರವರ ಟೆಂಡರ್ ಮೊತ್ತ ರೂ. ₹ 1,56,84,527-00 (ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 2.56 ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನಃ ವಿಶೇಷ ಆಯುಕ್ತರ ಟಿಪ್ಪಣಿಯಂತೆ ಟೆಂಡರ್ ದರಗಳನ್ನು ಒಪ್ಪಲು ಸಮಿತಿಯು ತೀರ್ಮಾನಿಸಲಾಯಿತು.**

## 10] ವಿಷಯ ಸಂಖ್ಯೆ:200/2011–12

ಆಯುಕ್ತರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಇದರ ವ್ಯಾಪ್ತಿಯು ಈ ಹಿಂದೆ ಇದ್ದ ಸುಮಾರು 225 ಚ.ಕಿ.ಮೀ ನಿಂದ 800 ಚ.ಕಿ.ಮಿ. ನಷ್ಟು ವ್ಯಾಪ್ತಿಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ ಸುಮಾರು 60 ಲಕ್ಷದಷ್ಟಿದ್ದು, 2011ರ ಅಂತ್ಯಕ್ಕೆ ಒಂದು ಕೋಟಿ ಮೀರುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ನಗರವು ನಿರಂತರವಾಗಿ ಬೆಳೆಯುತ್ತಿದ್ದು, ನಗರದ ಹೊರವಲಯದಲ್ಲಿ ಅನೇಕ ಕೈಗಾರಿಕೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಬೆಂಗಳೂರು ನಗರದ ವಾಹನ ಸಂಖ್ಯೆಯು ಕೂಡ ಸತತವಾಗಿ ಹೆಚ್ಚುತ್ತಿದ್ದು, 1980ರಲ್ಲಿ ಸುಮಾರು 17 ಲಕ್ಷದಷ್ಟಿದ್ದ ಸಂಖ್ಯೆಯು, 2011ರಲ್ಲಿ ಸುಮಾರು 40.00 ಲಕ್ಷಕ್ಕೆ ಬೆಳೆದಿರುತ್ತದೆ. ಈ ವಾಹನಗಳ ಪೈಕಿ ಹೆಚ್ಚಾಗಿ ದ್ವಿಚಕ್ರವಾಹನಗಳಾಗಿದ್ದು, ಇತ್ತೀಚೆಗೆ ಕಾರುಗಳ ಹಾಗೂ ಇತರೆ ವಾಹನಗಳ ಸಂಖ್ಯೆಯು ಸಹ ಅತಿ ವೇಗವಾಗಿ ಬೆಳೆಯುತ್ತಿದೆ.

ಬೆಂಗಳೂರು ನಗರದಲ್ಲಿನ ಪ್ರಮುಖ ಕಾರಿಡಾರ್‌ಗಳಲ್ಲಿ ಸುಮಾರು 600ಕ್ಕೂ ಹೆಚ್ಚು ಪ್ರಮುಖ ಜಂಕ್ಷನ್‌ಗಳಿದ್ದು, ಇವುಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿದ್ದು, ವಾಹನ ವೇಗದ ಮಿತಿ ಪ್ರತಿ ಗಂಟೆಗೆ ಸರಾಸರಿ 10.00ಕಿ.ಮೀ.ಗಿಂತ ಕಡಿಮೆಯಾಗಿದೆ. ಇಂತಹ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುವುದನ್ನು ತಪ್ಪಿಸಲು, ಸಿಗ್ನಲ್ ರಹಿತ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿದರೆ ವಾಹನ ಸಂಚಾರದ ವೇಗ ಹೆಚ್ಚಿಸಿ ಸುರಕ್ಷಿತ ಸಂಚಾರವನ್ನು ಕಲ್ಪಿಸುವುದಲ್ಲದೇ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿ ಸಾರ್ವಜನಿಕರ ಅಮೂಲ್ಯ ವೇಳೆಯ ಉಳಿತಾಯ ಅಲ್ಲದೆ ಇಂಧನ ಉಳಿಕೆ ಮತ್ತು ವಾಯುಮಾಲಿನ್ಯವನ್ನು ತಕ್ಕ ಮಟ್ಟಿಗೆ ಕಡಿಮೆಗೊಳಿಸಬಹುದಾಗಿದೆ.

2011–12 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ 7 ಕಾರಿಡಾರ್‌ಗಳನ್ನು ಸಿಗ್ನಲ್ ಮುಕ್ತಗೊಳಿಸಲು ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಪ್ರಸ್ತಾಪಿಸಿದ್ದು, ಅವುಗಳಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ (ಪುಟ ಸಂಖ್ಯೆ 180 ರಿಂದ 182 ರವರೆಗೆ). ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 7 ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಡ್ ಸೆಪರೇಟರ್ (ಮೇಲ್ಸೇತುವೆ ಮತ್ತು ಅಂಡರ್ ಪಾಸ್‌ಗಳನ್ನು) ನಿರ್ಮಾಣ ಮಾಡಿ ಸಿಗ್ನಲ್ ಮುಕ್ತಗೊಳಿಸಲು ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಕಾರಿಡಾರ್‌ನ ಹೆಸರು | ಜಂಕ್ಷನ್‌ಗಳ ಸಂಖ್ಯೆ | ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ಅಂದಾಜು ಒಟ್ಟು ವಿಸ್ತೀರ್ಣ (ಚ.ಮೀ.ಗಳಲ್ಲಿ) |
|---|---|---|---|
| 1 | ಡಾ॥ ರಾಜ್‌ಕುಮಾರ್ ರಸ್ತೆ– ಸರ್ಕಾರಿ ಸೋಪ್ ಕಾರ್ಖಾನೆ ಜಂಕ್ಷನ್ ನಿಂದ ಮಾಗಡಿ ರಸ್ತೆ ಡೀವಿಯೇಶನ್ ಜಂಕ್ಷನ್‌ವರೆಗೆ | | |
| | ವಿವೇಕಾನಂದ ಜಂಕ್ಷನ್ | 1 | 2275.00 |
| | ಓಕಳಿಪುರಂ ಜಂಕ್ಷನ್ | 1 | 1332.00 |
| | ಒಟ್ಟು | 2 | 3607.00 |
| 2 | ಮಾಗಡಿ ರಸ್ತೆ– ಕಾರ್ಡ್ ರಸ್ತೆಯಿಂದ ಹೊರವರ್ತುಲ ರಸ್ತೆ ಜಂಕ್ಷನ್‌ವರೆಗೆ | | |
| | ಜೈಮುನಿರಾವ್ ವೃತ್ತ | 1 | 2723.58 |

| | | | |
|---|---|---|---|
| | ಬಸವೇಶ್ವರನಗರ ಜಂಕ್ಷನ್ | 1 | 560.15 |
| | ನಿಗಧಿತ 'ಯು' ತಿರುವು ಪಟ್ಟಾಲಮ್ಮ ದೇವಸ್ಥಾನದ ರಸ್ತೆ | 1 | 1503.49 |
| | ಪಟ್ಟಾಲಮ್ಮ ರಸ್ತೆ ಮತ್ತು ಹೊರವರ್ತುಲ ರಸ್ತೆಯ ಜಂಕ್ಷನ್ ಹತ್ತಿರ 'ಯು' ತಿರುವು. | 1 | 1595.37 |
| | ಒಟ್ಟು | 4 | 6382.59 |
| 3 | ಹೊರವರ್ತುಲ ರಸ್ತೆ– ಮೈಸೂರು ರಸ್ತೆ ಜಂಕ್ಷನ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ | | |
| | ಕೆ.ಇ.ಬಿ. ಜಂಕ್ಷನ್ ಪಿ.ಇ.ಎಸ್.ಐ.ಟಿ | 1 | 156.22 |
| | ಡಾ|| ಮುತ್ತುರಾಜ್ ಜಂಕ್ಷನ್ | 1 | 2464.41 |
| | ಫುಡ್‌ವರ್ಲ್ಡ್ ಜಂಕ್ಷನ್ | 1 | 1794.04 |
| | ಡಾಲರ್ಸ್ ಕಾಲೋನಿ ಜಂಕ್ಷನ್ | 1 | 1675.01 |
| | ಒಟ್ಟು | 4 | 6089.68 |
| 4 | ಹೊಸೂರು ಲಷ್ಕರ್ ರಸ್ತೆ – ವೆಲ್ಲಾರ ಜಂಕ್ಷನ್ ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ | | |
| | (ಸಿಮೆಟ್ರಿ ರೋಡ್ ಜಂಕ್ಷನ್) ಬನ್ನೇರುಘಟ್ಟ ರಸ್ತೆ | 1 | 1945.88 |
| | ಆಡುಗೋಡಿ ಜಂಕ್ಷನ್ | 1 | 3043.94 |
| | ಲಾಂಗ್‌ಫೋರ್ಡ್ ಜಂಕ್ಷನ್ | 1 | 5937.19 |
| | ವೆಲ್ಲಾರ ಜಂಕ್ಷನ್ | 1 | 1102.64 |
| | ಒಟ್ಟು | 4 | 12029.65 |
| 5 | ಬನ್ನೇರುಘಟ್ಟ ರಸ್ತೆ – ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ವರೆಗೆ | | |
| | ಜೇಡಿಮರ ಜಂಕ್ಷನ್ | 1 | 12639.43 |
| | ಬಿಳೇಕಹಳ್ಳಿ ಜಂಕ್ಷನ್ | 1 | 7723.53 |
| | ಅರೆಕೆರೆ ರೋಡ್ ಜಂಕ್ಷನ್ | 1 | 9571.87 |
| | ಹುಳಿಮಾವು ಗೇಟ್ ಜಂಕ್ಷನ್ | 1 | 14459.63 |
| | ಒಟ್ಟು | 4 | 44394.46 |
| 6 | ಹಳೆ ವಿಮಾನ ನಿಲ್ದಾಣ ರಸ್ತೆ– ವೆಲ್ಲಾರ ಜಂಕ್ಷನ್ ನಿಂದ ರಾಜ್ಯ ಹೆದ್ದಾರಿ–35 ರವರೆಗೆ | | |
| | ಹೋಸ್ ಮ್ಯಾಟ್ ಜಂಕ್ಷನ್ | 1 | 4050.00 |

| | | | |
|---|---|---|---|
| | ಲೋಯರ್ ಅಗರಂ ಜಂಕ್ಷನ್ | 1 | 11169.00 |
| | ಎ.ಎಸ್.ಸಿ. ಜಂಕ್ಷನ್ | 1 | 3877.00 |
| | ಕಮಾಂಡೋ ಆಸ್ಪತ್ರೆ ಜಂಕ್ಷನ್ | 1 | 4168.00 |
| | ದೊಮ್ಮಲೂರು ಜಂಕ್ಷನ್ | 1 | 3290.00 |
| | ಮಣಿಪಾಲ್ ಆಸ್ಪತ್ರೆ ಜಂಕ್ಷನ್ | 1 | 2655.00 |
| | ವಿಂಡ್–ಟನಲ್ ಜಂಕ್ಷನ್ | 1 | 4136.00 |
| | ಸುರಂಜನ್‌ದಾಸ್ ಜಂಕ್ಷನ್ | 1 | 1888.00 |
| | ನಾಮ್‌ಜೋಶಿ ಜಂಕ್ಷನ್ | 1 | 7462.00 |
| | ಮಾರತ್‌ಹಳ್ಳಿ ಜಂಕ್ಷನ್ | 1 | 7348.00 |
| | ಕುಂದಲಹಳ್ಳಿ ಜಂಕ್ಷನ್ | 1 | 8599.00 |
| | ಒಟ್ಟು | 11 | 58642.00 |
| 7 | ಮೇಖ್ರಿ ಸರ್ಕಲ್‌ನಿಂದ ಹಳೆ ಮದ್ರಾಸ್ ರಸ್ತೆ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ–207 ವರೆಗೆ | | |
| | ಸಿ.ಐ.ಎಲ್. ಜಂಕ್ಷನ್ | 1 | 8043.00 |
| | ಮುನಿರೆಡ್ಡಿಪಾಳ್ಯ ಜಂಕ್ಷನ್ | 1 | 5126.00 |
| | ಜಯಮಹಲ್ 5ನೇ ಮುಖ್ಯರಸ್ತೆ ಜಂಕ್ಷನ್ | 1 | 4422.00 |
| | ನಂದಿದುರ್ಗ ರಸ್ತೆ ಜಂಕ್ಷನ್ | 1 | 4862.00 |
| | ಹೇನ್ಸ್ ಮತ್ತು ಸೆಪ್ಪಿಂಗ್ಸ್ ರಸ್ತೆ ಜಂಕ್ಷನ್ | 1 | 8694.00 |
| | ಧೋಭಿಘಾಟ್ ರಸ್ತೆ ಜಂಕ್ಷನ್ | 1 | 439.00 |
| | ಥಾಮರಾಯ್ ಕನ್ನನ್ ಮತ್ತು ಹಳೆ ಮದ್ರಾಸ್ ರಸ್ತೆ ಜಂಕ್ಷನ್ | 1 | 10890.00 |
| | ಇಂದಿರಾನಗರ ಡಬಲ್ ರೋಡ್ ಜಂಕ್ಷನ್ | 1 | 8641.00 |
| | ಇಂದಿರಾನಗರ 80 ಅಡಿ ರಸ್ತೆ ರೋಡ್ ಜಂಕ್ಷನ್ | 1 | 4462.00 |
| | ಸುರಂಜನ್ ದಾಸ್ ಜಂಕ್ಷನ್ | 1 | 13194.00 |
| | ವರ್ತೂರು (ಕಗ್ಗದಾಸ ಪುರ) ರಸ್ತೆ ಜಂಕ್ಷನ್ | 1 | 15049.00 |
| | ಹೆಚ್.ಪಿ.ರಸ್ತೆ ಜಂಕ್ಷನ್ | 1 | 2368.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಮೇಲು ಸೇತುವೆ) | 1 | 12089.00 |

| | | | |
|---|---|---|---|
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಅಂಡರ್ ಪಾಸ್) | 1 | 878.00 |
| | ಇ.ಪಿ.ಐ.ಪಿ ಮತ್ತು ಅಗ್ರಹಾರ ರಸ್ತೆ ಜಂಕ್ಷನ್ | 1 | 13168.00 |
| | ಹೋಪ್ ಫಾರಂ ರಸ್ತೆ ಜಂಕ್ಷನ್ | 1 | 2700.00 |
| | ಒಟ್ಟು | 16 | 115475.00 |
| | **ಏಳು ಕಾರಿಡಾರ್‌ಗಳಿಂದ ಒಟ್ಟು** | **45** | **246170.38 ಚ.ಮೀ.** |

ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಹಿಂದೆ ಟಿ.ಡಿ.ಆರ್. ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು. ಆದರೆ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅನೇಕ ಸ್ವತ್ತಿನ ಮಾಲೀಕರು ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೆ ಟಿ.ಡಿ.ಆರ್. ನಿಯಮಾವಳಿಯ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಕಾನೂನಿನ ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಒತ್ತಾಯಿಸುವಂತಿಲ್ಲ. ಈಗಾಗಲೇ ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿರುವುದರಿಂದ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಮುಂದೆ ಬರಲು ನಿಗಧಿತ 15 ದಿನಗಳ ಕಾಲಾವಕಾಶವನ್ನು ನೀಡಿ ತದನಂತರ ಸಾರ್ವಜನಿಕರಿಂದ ಸಾಕಷ್ಟು ಉತ್ತೇಜನ ದೊರಕದಿದ್ದಲ್ಲಿ ಭೂಸ್ವಾಧೀನ ಕಾಯ್ದೆ 1894ರ ಸೆಕ್ಷನ್ 23ರಲ್ಲಿ ನಿಗಧಿಪಡಿಸಲಾದ ದರಗಳ ಅನ್ವಯ ಪರಿಹಾರ ನೀಡಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕೆಂಬ ಅಂಶವನ್ನು ಗಮನಿಸಬೇಕಾಗಿರುತ್ತದೆ.

ಮೇಲ್ಕಂಡ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕಾಗಿದ್ದಲ್ಲಿ ಕಾಮಗಾರಿ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮುನ್ನ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ Encumbrance ಮತ್ತು ಮೊಕದ್ದಮೆ ಮುಕ್ತ ಸ್ವತ್ತಾಗಿ ಗುತ್ತಿಗೆದಾರರಿಗೆ ಯೋಜನಾ ಪ್ರದೇಶವನ್ನು ಹಸ್ತಾಂತರ ಮಾಡಿದಲ್ಲಿ ನಿಗಧಿತ ವೇಳೆಯೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು. ಇಲ್ಲದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಗುತ್ತಿಗೆದಾರರು ಕಾಮಗಾರಿಗಳ ಅನುಷ್ಠಾನಕ್ಕೆ ಆಗಿರುವ ಅಡಚಣೆ, ಕಾಲವಿಳಂಬದ ಬಗ್ಗೆ ಹೆಚ್ಚಿನ ಮೊತ್ತವನ್ನು ಕೋರಿರುವ ಉದಾಹರಣೆಗಳು ಈಗಾಗಲೇ ನಮ್ಮ ಮುಂದೆ ಇದ್ದು, ಇದರಿಂದ ಯೋಜನೆಯು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳದೆ ಸಾರ್ವಜನಿಕರಿಂದ ಸಾಕಷ್ಟು ದೂಷಣೆಗಳು ಬಂದಿರುತ್ತವೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2011–12ನೇ ಸಾಲಿನ ಅಯವ್ಯಯ ಅಂದಾಜಿನಲ್ಲಿ ಪ್ರಸ್ತಾಪಿಸಿರುವ 7 ಪ್ರಮುಖ ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಟ್ ಸೆಪರೇಟರ್‌ಗಳನ್ನು ನಿರ್ಮಿಸಲು ಬೇಕಾಗಿರುವ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಸದರಿ ಕಾರಿಡಾರ್‌ಗಳನ್ನು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪಡಿಸಿಕೊಳ್ಳಲು ಕಾಲಾವಕಾಶಗಳನ್ನು ನೀಡಿ ಟಿ.ಡಿ.ಆರ್. ಮುಖೇನವೇ ಭೂಸ್ವಾಧೀನ ಪ್ರಕ್ರಿಯೆಗೆ ಒತ್ತುಕೊಟ್ಟು ಬೇಕಾಗಿರುವ ಸ್ವತ್ತುಗಳನ್ನು ಪಡೆದುಕೊಳ್ಳಲು ಕ್ರಮವಹಿಸಲಾಗುವುದು. ಈ ಅವಧಿಯಲ್ಲಿಯೂ ಸಹ ಟಿ.ಡಿ.ಆರ್.ಗೆ ಸಾರ್ವಜನಿಕರಿಂದ ಯಾವುದೇ ಸ್ಪಂದನ/ಒಪ್ಪಿಗೆ ಸಿಗದೇ ಇದ್ದ ಪಕ್ಷದಲ್ಲಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಹಾಗೂ ಸಾರ್ವಜನಿಕರ ಅನಗತ್ಯ ತೊಂದರೆಗಳನ್ನು ನಿವಾರಿಸಲು ಮೇಲ್ಕಂಡ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆ ಸೆಕ್ಷನ್ 23ರ ಅನ್ವಯ ಭೂಸ್ವಾಧೀನವನ್ನು ಪ್ರತಿ ಜಂಕ್ಷನ್‌ವರೆಗೆ ಪ್ರಾಮುಖ್ಯತೆ ಮೇರೆಗೆ ಹಂತ ಹಂತವಾಗಿ ಸ್ವತ್ತುಗಳನ್ನು ವಶಪಡಿಸಿಕೊಂಡು ಹಾಗೂ ಅದಕ್ಕೆ ತಗಲುವ ಭೂಪರಿಹಾರ ಹಾಗೂ ಇತರೆ ವೆಚ್ಚಗಳಿಗೆ ಪಾಲಿಕೆಯ ಅಯವ್ಯಯದಲ್ಲಿ ಮೀಸಲಿಡುವ ಅನುದಾನದಿಂದ ಭರಿಸುವ ಬಗ್ಗೆ ಆಯುಕ್ತರಿಗೆ ಅಧಿಕಾರ ನೀಡಲು ಅನುಮೋದನೆಯನ್ನು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ಆಯುಕ್ತರವರ ಟಿಪ್ಪಣಿ.

**ತೀರ್ಮಾನಃ ಆಯುಕ್ತರ ಟಿಪ್ಪಣಿಯನ್ನು ಸಮಿಯು ಒಪ್ಪಿದೆ**

11] ವಿಷಯ ಸಂಖ್ಯೆಃ201/2011–12

ವಿಶೇಷ ಆಯುಕ್ತರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಓಕಳಿಪುರಂ ಜಂಕ್ಷನ್‌ನಿಂದ ಫೌಂಟೇನ್ ವೃತ್ತದವರೆಗೆ ಲೂಪ್‌ಗಳೊಂದಿಗೆ 8 ಪಥದ ಕಾರಿಡಾರ್ ರಸ್ತೆ, ಅಂಡರ್‌ಪಾಸ್ ಮತ್ತು ರೈಲ್ವೆ ಕೆಳಸೇತುವೆ ನಿರ್ಮಾಣದ ಕಾಮಗಾರಿ ಕೆಲಸವು ರೂ. 115.00 ಕೋಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಈ ಕಾಮಗಾರಿ ಕೆಲಸಕ್ಕೆ ರೂ. 40.00 ಕೋಟಿಗಳ ಅನುದಾನವನ್ನು 2011–12ನೇ ಸಾಲಿನಲ್ಲಿ ಒದಗಿಸಿರುತ್ತಾರೆ.

ಸದರಿ ಕಾಮಗಾರಿಯ 2ನೇ ಹಂತದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕನಿಷ್ಠ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ ಕಾಮಗಾರಿ ಸ್ಥಳವನ್ನು ಹಸ್ತಾಂತರಿಸುವ ಮುನ್ನ ಸದರಿ ಕಾಮಗಾರಿಯ ಸ್ಥಳದಲ್ಲಿ ಅಂಡರ್‌ಪಾಸ್ ಕಾಮಗಾರಿಗೆ ಅಡ್ಡಲಾಗಿ ಇರುವ ರೈಲ್ವೆ ನಿವೇಶನದ ರನ್ನಿಂಗ್ ರೂಮ್ ಕಟ್ಟಡವನ್ನು ತೆರವುಗೊಳಿಸಿ ರೈಲ್ವೇ ಇಲಾಖೆಯವರು ಸೂಚಿಸುವ ಬೇರೆ ನಿವೇಶನದಲ್ಲಿ ರನ್ನಿಂಗ್ ರೂಮ್ ಕಟ್ಟಡವನ್ನು ನಿರ್ಮಿಸುವುದು ಅತ್ಯಾವಶ್ಯಕವಾಗಿರುತ್ತದೆ. ಹಾಲಿ ಇರುವ ರನ್ನಿಂಗ್ ರೂಮ್ ನಿವೇಶನ ಜಾಗದಲ್ಲಿ ಪ್ರಸ್ತಾವಿತ ಯೋಜನೆಯ ಅಂಡರ್‌ಪಾಸ್ ಕಾಮಗಾರಿ ಬರುವುದರಿಂದ ತೆರವುಗೊಳಿಸಿ ಹೊಸದಾಗಿ ರನ್ನಿಂಗ್ ರೂಮ್ ಕಟ್ಟಡವನ್ನು ನಿರ್ಮಿಸುವುದು ಅವಶ್ಯವಾಗಿರುವುದನ್ನು ಮನಗಂಡು ರೈಲ್ವೇ ಇಲಾಖೆಯವರು ಪತ್ರ ಬರೆದು ರನ್ನೀಂಗ್ ರೂಮ್ ಕಟ್ಟಡವನ್ನು ಬದಲೀ ಜಾಗದಲ್ಲಿ ಜರೂರು ಪ್ರಾರಂಭಿಸಲು ಸೂಚನೆ ನೀಡಿರುತ್ತಾರೆ. ಹಾಗೂ ರನ್ನಿಂಗ್ ರೂಮ್ ಕಟ್ಟಡವನ್ನು ನಿರ್ಮಾಣಮಾಡಿದ ನಂತರ ಅಂಡರ್‌ಪಾಸ್ ಕಾಮಗಾರಿ ಪ್ರಾರಂಬಿಸಬೇಕೆಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಈ ಕಛೇರಿಯಿಂದ ಕ್ರಮ ತೆಗೆದುಕೊಂಡು ಸದರಿ ಯೋಜನೆಯ ಯೋಜನಾ ಸಮಾಲೋಚಕರಾದ ಮೆಃ ಮಾನಸ ಕನ್ಸಲ್ಟೆಂಟ್ ರವರು ಸದರಿ ರನ್ನಿಂಗ್ ರೂಮ್ ಕಟ್ಟಡದ ಅಂದಾಜನ್ನು ಲೋಕೋಪಯೋಗಿ ಇಲಾಖೆ ದರಪಟ್ಟಿ 2010–11ರಂತೆ ರೂ. 220.00 ಲಕ್ಷಗಳಿಗೆ ತಯಾರಿಸಿ ಸಲ್ಲಿಸಿದ್ದು ಸದರಿ ಅಂದಾಜು ಮೊತ್ತಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರ ವಿಷಯದ ಸಂಖ್ಯೆಃ ತೆಆಸ್ಥಾಸ/172/2011–12, ದಿನಾಂಕಃ01–08–2011ರಂದು ಕಾಮಗಾರಿ ಯೋಜನಾ ಶಾಖೆಯಲ್ಲಿನ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿರುತ್ತದೆ.

ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಆದೇಶ ಕೋರಿ ಪ್ರಸ್ತಾವನೆಯನ್ನು ಪಾಲಿಕೆಯ ಸಭೇಯ ಮುಂದೆ ಮಂಡಿಸಲು ಕೋರಲಾಗಿರುತ್ತದೆ.

1. **ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರ ರವರ ಸಂಖ್ಯೆಃ ತೆಆಸ್ಥಾಸ/172/2011–12, ದಿನಾಂಕಃ 01–08–2011ರ ಸಭೆಯ ನಡವಳಿಯಂತೆ ರನ್ನಿಂಗ್ ರೂಮ್ ಕಟ್ಟಡದ ಕಾಮಗಾರಿಯ ಅಂದಾಜು ಮೊತ್ತವಾದ ರೂ. 220.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಅನುಮೋದನೆ.**

2. **ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಾಲಿಕೆಯ ಸಭೆಯಿಂದ ಹಾಗೂ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಪಡೆಯಬೇಕಾಗಿದ್ದು ಪಾಲಿಕೆಯ ಸಭೆ ಹಾಗೂ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಕಾಮಗಾರಿಯನ್ನು ಇ–ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಸಮಿತಿಯ ಅನುಮೋದನೆ ಕೋರಿ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.**

**" ಮುಂದೂಡಿದೆ "**

12] ವಿಷಯ ಸಂಖ್ಯೆಃ 202/2011–12

**ವಿಷಯ:** ಬ್ಯಾಟರಾಯನಪುರ ವಲಯದ ಬೆಂಗಳೂರು ಹಾಗೂ ಯಲಹಂಕ ಮಧ್ಯೆ ರೈಲ್ವೆ ಹಳಿಗೆ (ಅಲ್ಲಾಳಸಂದ್ರದ ಹತ್ತಿರ ಎಲ್.ಸಿ.ನಂ.11) ಆರ್‌ಓಬಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 26.00 ಕೋಟಿಗಳಿಗೆ ಅನುಮೋದನೆ ಕೋರಿ

**ಉಲ್ಲೇಖ:**–1 ಸರ್ಕಾರಿ ಆದೇಶ ಸಂಖ್ಯೆ ಸಂನಅಇ496ಎಂ.ಎಸ್.ವೈ 2008, ಬೆಂಗಳೂರು. ದಿ:29–05–2009

* * * * * *

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯ ಮತ್ತು ಉಲ್ಲೇಖದ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ವ್ಯಾಪ್ತಿಯ ಅಲ್ಲಾಳಸಂದ್ರದ ಹತ್ತಿರವಿರುವ ಎಲ್.ಸಿ.ನಂ. 11 ಕಿ.ಮೀ. 15/700–800 ಬಳಿ ಆರ್‌ಯುಬಿ ನಿರ್ಮಿಸಲು ಪ್ರಸ್ತಾವನೆಯಿದ್ದು, ಅಂದಾಜು ಮೊತ್ತ ರೂ. 30.00 ಕೋಟಿಗಳಿಗೆ ಈಗಾಗಲೇ ಘನ ಸರ್ಕಾರದಿಂದ ಆದೇಶ ಸಂಖ್ಯೆ: ನಇ498 ಎಂಎನ್‌ವೈ 2008. ಬೆಂಗಳೂರು ದಿನಾಂಕ: 29/05/2009 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತ್ತಿರುತ್ತದೆ.

ಸದರಿ ಸ್ಥಳದಲ್ಲಿ ರಸ್ತೆ ಕೆಳಸೇತುವೆ ನಿರ್ಮಿಸಲು ಉದ್ದೇಶಿಸಲಾಗಿದ್ದು GAD ಸಹ ಅನುಮೋದನೆಗೊಂಡಿತ್ತು.

ಆದರೆ ನೈರುತ್ಯ ರೈಲ್ವೆ ಇಲಾಖೆಯ ವಿಳಂಬದಿಂದಾಗಿ ಆರ್‌ಯುಬಿಯ ಕಾಮಗಾರಿಯು ನಿಗದಿತ ಸಮಯದಲ್ಲಿ ಪ್ರಾರಂಭವಾಗದೇ ಇದ್ದು, ಇದೇ ಸಮಯದಲ್ಲಿ NH–7 ರಲ್ಲಿ NHAI ರವರು ಹೆಬ್ಬಾಳ (ಮೇಲು ಸೇತುವೆ)ಯಿಂದ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ವರೆಗೆ Elevated highway ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಸರ್ವೀಸ್ ರಸ್ತೆ ನಿರ್ಮಾಣವನ್ನು ಕೈಗೆತ್ತಿಕೊಂಡು ನಿರ್ವಹಿಸುತ್ತಿದ್ದ ಕಾರಣ ನೈರುತ್ಯ ರೈಲ್ವೆ ಇಲಾಖೆ ವತಿಯಿಂದ ಪ್ರಸ್ತಾವನೆಯಲ್ಲಿದ್ದ ಆರ್‌ಯುಬಿ ಹಾಗೂ Elevated highway alignment conflict ಆಗಿರುತ್ತದೆ. ಉದ್ದೇಶಿತ RUB Alignment ಬದಲಾಯಿಸಿದರೆ ಅಗಾಧ ಪ್ರಮಾಣದ ಖಾಸಗಿ ಸ್ವತ್ತನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಅಲ್ಲದೆ ಪರಿಹಾರ ಮೊತ್ತವು ಅಧಿಕವಾಗುತ್ತದೆ.

ಆದಕಾರಣ RUB ಬದಲಾಗಿ ROB ನಿರ್ಮಾಣ ಮಾಡಲು ರೈಲ್ವೇ ಇಲಾಖೆಯೊಂದಿಗೆ ಹಲವು ಭಾರಿ ಚರ್ಚಿಸಿ, ಸ್ಥಳ ತಪಾಸಣೆ ಮಾಡಿ ರೈಲ್ವೆ ಮೇಲು ಸೇತುವೆಯ ನಿರ್ಮಾಣದ ಸಾದ್ಯತೆ ಪರಿಶೀಲಿಸಲು ನೈರುತ್ಯ ರೈಲ್ವೆ ಇಲಾಖೆಗೆ ಕೋರಲಾಗಿತ್ತು. ನೈರುತ್ಯ ರೈಲ್ವೆ ಇಲಾಖೆಯವರು ಆರ್‌ಓಬಿಗೆ ತಾಂತ್ರಿಕ ಅಂಶಗಳ ಆಧಾರದಲ್ಲಿ ಸದರಿ ರೈಲ್ವೆ ಎಲ್.ಸಿ ನಂ. 11 ಕ್ಕೆ ಆರ್‌ಓಬಿಯು ಪರ್ಯಾಯ ಹಾಗೂ ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ತತ್ಸಂಬಂಧ ನೈರುತ್ಯ ರೈಲ್ವೆ ಇಲಾಖೆಯವರು ರೈಲ್ವೆ ಮೇಲು ಸೇತುವೆಯನ್ನು ನಿರ್ಮಿಸಲು ಜಿ.ಎ.ಡಿ ಹಾಗೂ ಅಂದಾಜು ಪಟ್ಟಿಯನ್ನು ರೈಲ್ವೆ ಇಲಾಖೆಯ ನಿಯಮಾವಳಿಗನುಗುಣವಾಗಿ ತಯಾರಿಸಿ ಸಲ್ಲಿಸಿರುತ್ತಾರೆ. ರೈಲ್ವೆ ಇಲಾಖೆಯಿಂದ GAD ಅನುಮೋದನೆ ನಿರೀಕ್ಷಿಸಲಾಗಿದೆ.

ಈ ಯೋಜನೆಯಲ್ಲಿ 4 ಪಥಗಳ ರಸ್ತೆಯ ಮೇಲುಸೇತುವೆ ನಿರ್ಮಾಣ ಹಾಗೂ ಮೇಲುಸೇತುವೆ ಅಡಿಯಲ್ಲಿ ನ್ಯಾಯಾಂಗ ಬಡಾವಣೆಗೆ ವಾಹನ ಸಂಚಾರಕ್ಕಾಗಿ ಅವಕಾಶ ಕಲ್ಪಿಸಿದೆ. ನಾಗರೀಕ ಸೌಲಭ್ಯಗಳ ಸ್ಥಳಾಂತರ, ಭೂಸ್ವಾಧೀನ ಮತ್ತು ಮೇಲುಸೇತುವೆಗೆ ವಿಧ್ಯುಧೀಕರಣ ಹಾಗೂ ಇತ್ಯಾದಿ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಈ ಆರ್‌ಓಬಿ ನಿರ್ಮಾಣದಿಂದ ನಗರ ಹಾಗೂ ಯಲಹಂಕ ಪಟ್ಟಣ, ಯಲಹಂಕ ಉಪನಗರ, ಇತರೆ ಪಟ್ಟಣ ಮತ್ತು ಜಿಲ್ಲಾ ಕೇಂದ್ರಗಳಿಗೆ ವಾಹನ ಸಂಚಾರ ಸುಗಮವಾಗುತ್ತದೆ. ಇಲ್ಲಿನ ವಾಹನ ದಟ್ಟಣೆಯನ್ನು ದಿನಾಂಕ:ಸೆಪ್ಟೆಂಬರ್ 2009 ರಲ್ಲಿ ಗಣತಿ ಮಾಡಿರುವಂತೆ 2,63,460.00 T.V.U ಆಗಿರುತ್ತದೆ. ROB ನಿರ್ಮಾಣದಿಂದ ವಾಹನಸಂಚಾರ ಸಮಯ ಕಡಿಮೆಯಾಗುವುದು, ಪರಿಸರ ಮಾಲೀನ್ಯ ವಾಹನಗಳ ನಿರ್ವಹಣೆ ವೆಚ್ಚ ಕಡಿಮೆ ಮಾಡಬಹುದಾಗಿದೆ. ಈ ಸ್ಥಳದಲ್ಲಿ RUB ನಿರ್ಮಾಣ

ಕಾಮಗಾರಿಯನ್ನು ಕೈಗೊಳ್ಳಲು 2008–09 ನೇ ಸಾಲಿನ ಆಯವ್ಯಯದಲ್ಲಿ ರೂ. 100.00 ಲಕ್ಷ, 2009–10ರಲ್ಲಿ 150.00ಲಕ್ಷ ಹಾಗೂ 2010–11 ರಲ್ಲಿ 50.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ನೈರುತ್ಯ ರೈಲ್ವೆ ಇಲಾಖೆಯವರು ಸಲ್ಲಿಸಿರುವ ಆರ್‌ಓಬಿ ಗೆ ಸಂಬಂಧಪಟ್ಟ ಅಂದಾಜು ಪಟ್ಟಿಯ ವಿವರ ಈ ಕೆಳಗಿನಂತಿದೆ.

- ಕಾಮಗಾರಿಯ ಅಂದಾಜು ಮೊತ್ತ ರೂ. 2340.41 ಲಕ್ಷಗಳು
- ನೈರುತ್ಯ ರೈಲ್ವೆ ಇಲಾಖೆಯವರು ಭರಿಸಬೇಕಾದ ಮೊತ್ತ ರೂ. 809.19 ಲಕ್ಷಗಳು
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಭರಿಸಬೇಕಾದ ಮೊತ್ತ ರೂ.1531.22 ಲಕ್ಷಗಳು

ಒಟ್ಟಾರೆ ಯೋಜನೆಯ ಅಂದಾಜುಪಟ್ಟಿಯ ಮೊತ್ತ ರೂ. 2600.00 ಲಕ್ಷಗಳಾಗಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಭಾಗ–1 | ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಬಾಕ್ಸ್ ಮತ್ತು ಅಪ್ರೋಚ್ ರಸ್ತೆ ಕಾಮಗಾರಿಯ ಅಂದಾಜು ಮೊತ್ತ | ರೂ.2340.41 ಲಕ್ಷಗಳು |
| ಭಾಗ–2 | ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ ಪಡೆಸಿಕೊಳ್ಳಲು ಅವಶ್ಯಕವಿರುವ ಮೊತ್ತ | ರೂ.222.00 ಲಕ್ಷಗಳು |
| | ಮೇಲುಸೇತುವೆಯ ವಿದ್ಯುಧೀಕರಣಕ್ಕೆ | ರೂ. 20.00 ಲಕ್ಷಗಳು |
| | ಇತರೆ (Miscellaneous and unforeseen charges) | ರೂ.17.59 ಲಕ್ಷಗಳು |
| | ಭಾಗ –2 ರ ಮೊತ್ತ | ರೂ.259.59 ಲಕ್ಷಗಳು |
| | **ಒಟ್ಟು ಮೊತ್ತ** | ರೂ.2600.00 ಲಕ್ಷಗಳು |

ಸದರಿ ROB ಯೋಜನೆಯ ಅಂದಾಜು ಪಟ್ಟಿ ಮೊತ್ತ ರೂ.2600.00 ಲಕ್ಷಗಳಾಗಿದ್ದು, ಇದು ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುವ ರೂ.3000.00 ಲಕ್ಷಗಳಿಗಿಂತ ಕಡಿಮೆ ಇದ್ದು ಮತ್ತು ಆರ್ಥಿಕ ಹೊರೆ ಇರುವುದಿಲ್ಲ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಘನ ಸರ್ಕಾರದಿಂದ ಈಗಾಗಲೇ ಅನುಮೋದನೆಗೊಂಡಿರುವ RUB ಯೋಜನೆ ಮೊತ್ತ ರೂ.3000.00 ಲಕ್ಷಗಳ ಬದಲು ROB ಯೋಜನೆ (ರೂ. 2600.00 ಲಕ್ಷಗಳು) ಯನ್ನು ಕೈಗೊಳ್ಳಲು.
2. ಪಾಲಿಕೆಯಿಂದ ರೈಲ್ವೆ ಇಲಾಖೆಗೆ ಪಾವತಿಸಬೇಕಾದ ಮೊತ್ತ ರೂ. 1531.22 ಲಕ್ಷಗಳಾಗಿದ್ದು, ಇದನ್ನು ರೈಲ್ವೆ ಇಲಾಖೆಗೆ ನೀಡಲು ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಅಂದಾಜು ಮೊತ್ತ ರೂ.259.59 ಲಕ್ಷಗಳಿಗೆ ಪ್ರತ್ಯೇಕ ಆಡಳಿತಾತ್ಮಕ ಅನುಮೋದನೆ.
3. ಈ ಹಿಂದೆ ಸದರಿ ಜಾಗದಲ್ಲಿ RUB ನಿರ್ಮಿಸಲು ರೂ.3000.00 ಲಕ್ಷಗಳ ಅಂದಾಜಿಗೆ ಘನ ಸರ್ಕಾರದಿಂದ ಈಗಾಗಲೇ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದ್ದು ಈಗ RUB ಬದಲಾಗಿ ಅದೇ ಸ್ಥಳದಲ್ಲಿ ROB ನಿರ್ಮಿಸಲು ರೂ.2600.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿರುವ ಅಂಶವನ್ನು ಸರ್ಕಾರದ ಗಮನಕ್ಕೆ ತಂದು ಅನುಮೋದನೆ ಪಡೆಯಲು.
4. ಸರ್ಕಾರದ ಅನುಮೋದನೆ ನಿರೀಕ್ಷಿಸಿ ನೈರುತ್ಯ ರೈಲ್ವೆ ಇಲಾಖೆಯು ಸಲ್ಲಿಸಿರುವ ಅಂದಾಜು ಪಟ್ಟಿಗೆ ಮೇಲುರುಜು ಮಾಡಲು ಅನುಮತಿ.

5. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅವಶ್ಯಕವಿರುವ **1716.61** ಚ.ಮೀ ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ

**" ಮುಂದೂಡಿದೆ "**

13] ವಿಷಯ ಸಂಖ್ಯೆ:203/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ: 107 ಶಿವನಗರದಲ್ಲಿ ನವೀನ ರೀತಿಯಲ್ಲಿ ದೋಭಿಘಾಟ್ ಅನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಾಗಿ ರೂ. 100.00 ಲಕ್ಷಗಳ ಅಂದಾಜು ಪ್ರಸ್ತಾವನೆಯನ್ನ_ ಸಿದ್ಧಪಡಿಸಿ ಅಗತ್ಯ ಅನುಮೋದನೆಗಳೊಂದಿಗೆ ಟೆಂಡರ್‌ಅನ್ನು ಅಹ್ವಾನಿಸಿದ್ದು, ದಿನಾಂಕ: 12-05-2011ರಂದು ಜಾಬ್ ಸಂಖ್ಯೆ: 107-11-000018 ದೊರೆತಿರುತ್ತದೆ.

ಈ ಸಂಬಂಧ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್ ಅವರು ಅಂದಾಜು ಪಟ್ಟಿಗಿಂತ ಶೇಕಡ 14ರಷ್ಟು ಹೆಚ್ಚಿನ ಹಣಕ್ಕೆ ಸದರಿ ಕಾಮಗಾರಿಯನ್ನು ಕೋರಿರುತ್ತಾರೆ.

ತದನಂತರ ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಲಾಗಿದ್ದು ರೂ. 1,09,44,000-00 ಶೇಕಡ 9.44ರಷ್ಟು ಹೆಚ್ಚಿನ ಹಣಕ್ಕೆ ಈ ಕಾಮಗರಿಯನ್ನು ನಿರ್ವಹಿಸಲು ಕೋರಿರುತ್ತಾರೆ.

| Sl.No | Name of the work | Est. cost Rs. in lakhs | Tender cost after Negotiation |
|---|---|---|---|
| 1 | Providing & construction of Automatic washing machine & rooms at Shivanagar Dhobi Ghat in ward NO-107 | 100.00 | 109.44 lakhs |

ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರ ಟಿಪ್ಪಣಿಯಂತೆ ಸದರಿ ಕಾಮಗಾರಿಗೆ ಅನುಮೋದನೆ ನೀಡಲು ಸಮಿತಿಯು ಒಪ್ಪಲಾಯಿತು.**

14] ವಿಷಯ ಸಂಖ್ಯೆ:204/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಾರ್ಡ್ ನಂ: 187 ಗುರುರಾಜ ಲೇಔಟ್‌ನಿಂದ ರಾಜೀವ್ ನಗರವ ವರೆಗೆ ಹರಿಯುತ್ತಿರುವ ಬೃಹತ್ ನೀರುಗಾಲುವೆಯ ಕಾಮಗಾರಿಯನ್ನು (Construction of RCC box drain from Gururaj Layout to Rajive Nagar for SWD V-303 in Vrishabhavathi valley, in ward no 182) ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆದಿದ್ದು, ಸದರಿ ಕಾಮಗಾರಿಗೆ ಶ್ರೀ. ಟಂಟಂ ಪೆದ್ದಗುರುವರೆಡ್ಡಿ ಗುತ್ತಿಗೆದಾರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ. ಇವರು ನಮೂದಿಸಿರುವ ದರಗಳು 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ 7.90% ಹೆಚ್ಚುವರಿಯಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಗಳು ಸಕ್ಷಮ ಪ್ರಾಧಿಕಾರದಿಂದ ದಿನಾಂಕ 28-12-2012ರಂದು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅನುಮೋದನೆಗೊಂಡಿರುತ್ತದೆ.

ಆದುದರಿಂದ ಶ್ರೀ. ಟಂಟಂ ಪೆದ್ದಗುರುವಾರೆಡ್ಡಿ ಗುತ್ತಿಗೆದಾರರು ನಮೂದಿಸಿರುವ ದರಗಳಾದ ರೂ. 2,37,38,130.00ಲಕ್ಷ 7.90% ಗಳ ಗುತ್ತಿಗೆಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನ : ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಭೆಯು ಒಪ್ಪಿತು.**

## 15] ವಿಷಯ ಸಂಖ್ಯೆ:205/2011–12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ವಿಜಯನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ: 133ರ ಶ್ರೀ. ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದಶಗಳು ಅತಿ ಹೆಚ್ಚು ಮಳೆ ಬಂದಾಗ ಜಲಾವೃತಗೊಳ್ಳುತ್ತಿದ್ದು, ಇದರಿಂದಾಗಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಅಪಾರ ನಷ್ಟ ಉಂಟಾಗುತ್ತಿದೆ. ಹಾಗೂ ಮೈಸೂರು ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿರುತ್ತದೆ. ಆದುದರಿಂದ ಶಾಶ್ವತ ಪರಿಹಾರಕ್ಕಾಗಿ ಸ್ಥಳಕ್ಕೆ ಅನುಗುಣವಾಗಿ ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕವಿಕಾ ಸೇತುವೆ, ಮೈಸೂರು ರಸ್ತೆವರೆಗೆ ಬೃಹತ್ ಮಳೆ ನೀರುಗಾಲುವೆಯ (V-100, i.e., ch: 8090m to 8760m) ಪುನರ್ ನವೀಕರಣ ಕಾಮಗಾರಿಗೆ ಅಂದಾಜುಪಟ್ಟಿಗಳನ್ನು 2011–12ರ S.R. ದರಗಳ ಅನ್ವಯ ತಯಾರಿಸಲಾಗಿರುತ್ತದೆ.

1. Providing Jacketing of SWD V-100 from Ch: 809.00m to 8175.00m on both sides near Gali Anjaneya Swami Temple est cost Rs.21.50 lakhs.
2. Construction of RCC retaining wall on LHS of Primary Storm water drain V-100 from Ch 8175.00m to 8760.00m at Gali Anjaneya Temple est cost-Rs.426.00lakhs.
3. Providing Bed protection for primary storm water drain V-100 from ch:8090.00m to 8760.00m from sri Gali Anjaneya swamy temple to KAVIKA bridge, est. cost Rs. 488.00 lakhs.
4. Providing Mechanical garbage clearing device to remove floating materials/ Garbage/ silt at upstream of Bapuji nagara bridge est. cost. 49.50 lakhs

ಈ ಮೇಲ್ಕಂಡ ಕಾಮಗಾರಿಗಳ ಅಗತ್ಯತೆ ಇರುವುದರಿಂದ 2011–12ರ ಆಯವ್ಯದಲ್ಲಿ ಸೇರಿಸಿಕೊಳ್ಳಲಾಗಿದ್ದು ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಭೆಯು ಒಪ್ಪಿತು.**

## 16] ವಿಷಯ ಸಂಖ್ಯೆ:206/2011–12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ: ರಾಜ್‌ಕುಮಾರ್ ವಾರ್ಡ್ ಸಂಖ್ಯೆ: 106ರ ರಾಜಾಜಿನಗರ 6ನೇ ಬ್ಲಾಕ್‌ನಿಂದ ಮಾಗಡಿ ಮುಖ್ಯ ರಸ್ತೆವರೆಗೆ ಆರ್.ಸಿ.ಸಿ. ಚರಂಡಿ ಹಾಗೂ ಪಾದಚಾರಿ ಮಾರ್ಗ ನಿರ್ಮಾಣ ಮಾಡುವ (Construction of RCC drain and footpath from Rajajinagar 6$^{th}$ block to Magadi main road ) ಕಾಮಗಾರಿಗೆ ರೂ. 120.00 ಲಕ್ಷಗಳ ಅಂದಾಜು ಪಟ್ಟಿಯು ಅನುಮೋದನೆಗೊಂಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು E-procurement ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಒಟ್ಟು ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ತಾಂತ್ರಿಕ ಬಿಡ್‌ನಲ್ಲಿ 2 ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ. ಜಿ.ಚಂದ್ರಶೇಖರ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿರುತ್ತಾರೆ. ಇವರುಗಳ ವಿವರ ಕೆಳಕಂಡಂತಿರುತ್ತದೆ.

| ಕ್ರ. ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡವಾರು ಹೆಚ್ಚು/ಕಡಿಮೆ (2010–11ರ ದರಗಳ ಮೇಲೆ ಹಾಗೂ ತ್ರೈಮಾಡಿಕ ನೀಡಿಕೆ ದರ) | ಶೇಕಡವಾರು ಹೆಚ್ಚ/ಕಡಿಮೆ(201–12ನೇ ಸಾಲಿನ ದರಗಳ ಪ್ರಕಾರ) | ಷರಾ |
|---|---|---|---|---|---|---|
| 1 | ಶ್ರೀ.ಜಿ.ಚಂದ್ರಶೇಖರ್ | **1,15,94,744.00** | **1,08,87,358.00** | 6.1% ಕಡಿಮೆ | 12.02% ಕಡಿಮೆ | L1 |
| 2 | ಶ್ರೀ.ನರಸಿಂಹಮೂರ್ತಿ .ಹೆಚ್. | | **1,29,58,713.00** | 11.76% ಹೆಚ್ಚುವರಿ | 4.707%ಹೆಚ್ಚುವರಿ | L2 |

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ನಮೂದಿಸಿರುವ L1 ಗುತ್ತಿಗೆದಾರರಾದ ಶ್ರೀ. ಜಿ.ಚಂದ್ರಶೇಖರ್ ರವರ ಟೆಂಡರ್ ಅನ್ನು 2011–12ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 12.02% ರಷ್ಟು ಕಡಿಮೆ ಇರುತ್ತದೆ.

ಈ ಮೇರೆಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರಾದ ಶ್ರೀ. ಜಿ.ಚಂದ್ರಶೇಖರ್ ರವರ ಗುತ್ತಿಗೆ ಮೊತ್ತ ರೂ. 1,08,87,358.00 ( ಒಂದು ಕೋಟಿ ಎಂಟು ಲಕ್ಷದ ಎಂಬತ್ತೇಳು ಸಾವಿರದ ಮೂರು ನೂರ ಐವತ್ತೆಂಟು)ಗಳ ಟೆಂಡರ್ ಅನ್ನು ಅನುಮೋದಿಸಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**" ಮುಂದೂಡಿದೆ "**

**(ಜಿ.ಹೆಚ್.ರಾಮಚಂದ್ರ)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**ಪ್ರತಿಯನ್ನು:**

1. ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
3. ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಆಯುಕ್ತರವರಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರವರಿಗೆ / ಅಪರ ಆಯುಕ್ತರು (ಯೋಜನೆ) ರವರಿಗೆ ಕಳಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 22-03-2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 01 | ಹೆಚ್.ಜಿ.ರಾಮಚಂದ್ರ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 02 | ಹೆಚ್.ಎಸ್.ಲಲಿತಾ | ಸದಸ್ಯರು | 2 | ಕಾರ್ಯಪಾಲಕ ಅಭಿಯಂತರರು, ( ರಸ್ತೆ & ಮೂಲಭೂತ, ಬೃ.ನಿ.ಗಾ, ಯೋಜನೆ ) |
| 03 | ಎಮ್.ಗೋಪಿ | | | |
| 04 | ಮುನೀಂದ್ರ ಕುಮಾರ್.ಕೆ.ಎ. | ಸದಸ್ಯರು | | |
| 05 | ಎಂ.ಕೃಷ್ಣಪ್ಪ | ಸದಸ್ಯರು | | |
| 06 | ಹೆಚ್.ನಾರಾಯಣ | ಸದಸ್ಯರು | | |
| 07 | ಸೀಮಾ ಖಾನಂ | ಸದಸ್ಯರು | | |
| 08 | ಮುನಿಸಂಜೀವಯ್ಯ | ಸದಸ್ಯರು | | |
| 09 | ಲೋಕೇಶ್ | ಸದಸ್ಯರು | | |
| 10 | ಎಂ.ಮುನಿಸ್ವಾಮಿ | ಸದಸ್ಯರು | | |
| 11 | ಕೆ. ಶಿವಕುಮಾರ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)

## 01] ವಿಷಯ ಸಂಖ್ಯೆ:183/2011-12

ವಿಶೇಷ ಆಯುಕ್ತರವರು ದಿನಾಂಕಃ10-01-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಪಡುವ ಸರ್ಜಾಪುರದ ಹತ್ತಿರವಿರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 131, ರೈಲ್ವೆ ಕಿ.ಮೀ. 192/600-700 ಬಳಿ ರಸ್ತೆ ಮೇಲು ಸೇತುವೆ ಕಾಮಗಾರಿಯು ಪ್ರಸ್ತಾವನೆಯಲ್ಲಿದೆ. ಸದರಿ ಕಾಮಗಾರಿಯನ್ನು ನೈರುತ್ಯ ರೈಲ್ವೆ ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಂಟಿಯಾಗಿ ಹಣ ಹಂಚಿಕೆ ಆಧಾರದಲ್ಲಿ (Cost Sharing) ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಯ ಡಿ.ಪಿ.ಆರ್ ಗಳನ್ನು ಸಮಾಲೋಚಕರಾದ ಮೆ.// ಮಾನಸ ಕನ್ಸಲ್ಟೆಂಟ್ ರವರು ತಯಾರಿಸಿ ಸಿದ್ಧಪಡಿಸಿದ ಜಿ.ಎ.ಡಿಯನ್ನು ನೈರುತ್ಯ ರೈಲ್ವೆ ಇಲಾಖೆಗೆ ನೈರುತ್ಯ ರೈಲ್ವೆ ಇಲಾಖೆಯ ಮುಖ್ಯ ಅಭಿಯಂತರರು (ನಿರ್ಮಾಣ ಕೇಂದ್ರ) ಅನುಮೋದನೆ ನೀಡಿರುತ್ತಾರೆ. ಹಾಗೂ ರೈಲ್ವೆ ನಿಯಮಾವಳಿಗನುಗುಣವಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನುಮೋದನೆಗೆ ಸಲ್ಲಿಸಿರುತ್ತಾರೆ.

ನೈರುತ್ಯ ರೈಲ್ವೆ ಇಲಾಖೆಯು ಪಾಲಿಕೆಯ ಅನುಮೋದನೆಗಾಗಿ ಸಲ್ಲಿಸಿರುವ ಯೋಜನೆಯು ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

1. 17.00 ಮೀ. ಅಗಲದ 4 ಪಥಗಳುಳ್ಳ ರಸ್ತೆಯ ಮೇಲು ಸೇತುವೆ. (ಆರ್.ಓ.ಬಿ.)
2. ಮೇಲು ಸೇತುವೆಯು 8 ಪಿಯರ್‌ಗಳನ್ನು ಹೊಂದಿದ್ದು, ರೈಲ್ವೆ ಆಬ್ಲಿಗೇಟರಿ ಸ್ಪ್ಯಾನ್-36.00 ಮೀ. ಸರ್ಜಾಪುರದ ಕಡೆಗೆ ಸ್ಟಾಂಡರ್ಡ್ ಸ್ಪ್ಯಾನ್- 40.00 ಮೀ. ಗಳು ಹಾಗೂ ಬೆಂಗಳೂರು ಸಿಟಿ ಕಡೆಗೆ ಸ್ಟಾಂಡರ್ಡ್ ಸ್ಪ್ಯಾನ್ 80.00 ಮೀ. ಗಳನ್ನು ಒಳಗೊಂಡಿರುತ್ತದೆ.
3. 2.24 ಮೀ ಎತ್ತರದ composite girder ಹೊಂದಿರುತ್ತದೆ.

4. ಮೇಲು ಸೇತುವೆಯು ಇಳಿಜಾರು 1:20 ಅನುಪಾತದಲ್ಲಿ ಇದ್ದು, ಸರ್ಜಾಪುರದ ಕಡೆಯ ಅಪ್ರೋಚ್ ರಸ್ತೆಯು 116.00 ಮೀ. ಗಳು ಹಾಗೂ ಅಗರ ಗೇಟ್ ಕಡೆಯ ಅಪ್ರೋಚ್ ರಸ್ತೆಯು 87.64 ಮೀ. ಇರುತ್ತದೆ.
5. ಪಾದಾಚಾರಿಗಳು ರೈಲ್ವೆ ಹಳಿಯನ್ನು ದಾಟಲು ಮೇಲು ಸೇತುವೆಯ ಪಕ್ಕದಲ್ಲಿ ಅನುಕೂಲವಾಗುವಂತೆ ನಿಯಮಿತ ಎತ್ತರದ ಪಾದಚಾರಿ ಸುರಂಗ ಮಾರ್ಗ ನಿರ್ಮಾಣ ಮಾಡಲು ಪ್ರಸ್ತಾಪಿಸಲಾಗಿದೆ.
6. ರಸ್ತೆಯ ಮಟ್ಟದಲ್ಲಿ ರಸ್ತೆಯ ಎರಡೂ ಬದಿ 5.50 ಮೀ. ಅಗಲದ ಸರ್ವೀಸ್ ರಸ್ತೆಯ ನಿರ್ಮಾಣ.
   ಈ ಎಲ್ಲಾ ಅಂಶಗಳನ್ನು ಒಳಗೊಂಡ ಯೋಜನೆಯನ್ನು ಕಾರ್ಯಗತಗೊಳಿಸಲು ಸುಮಾರು 1511.3 ಚ.ಮೀ. (16259.17 ಚದರ ಅಡಿ) ಗಳಷ್ಟು ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ.

ನೈರುತ್ಯ ರೈಲ್ವೆ ಇಲಾಖೆಯ ಅನುಮೋದಿತ ಜಿ.ಎ.ಡಿ. ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ರೈಲ್ವೆ ನಿಯಮಾವಳಿಗನುಸಾರವಾಗಿ ರೂ. 17,77,34,581.00 ಗಳಿಗೆ ತಯಾರಿಸಿ ಅನುಮೋದನೆಗಾಗಿ ಪಾಲಿಕೆಗೆ ಸಲ್ಲಿಸಿರುತ್ತಾರೆ. ಅಂದಾಜು ಪಟ್ಟಿಯು ಮೇಲು ಸೇತುವೆಯ ನಿರ್ಮಾಣ, ಅಪ್ರೋಚ್ ರಸ್ತೆ ನಿರ್ಮಾಣ, ಮೂಲಭೂತ ಸೌಕರ್ಯಗಳ ಸ್ಥಳಾಂತರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಅಂದಾಜು ಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

1. ಕಾಮಗಾರಿಗೆ ತಗಲುವ ಒಟ್ಟು ಮೊತ್ತ ರೂ. 1777.35 ಲಕ್ಷಗಳು
2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೈರುತ್ಯ ರೈಲ್ವೆ ಇಲಾಖೆಗೆ ಭರಿಸಬೇಕಾದ ಮೊತ್ತ ರೂ. 11,87.21 ಲಕ್ಷಗಳು
3. ನೈರುತ್ಯ ರೈಲ್ವೆ ಇಲಾಖೆಯವರು ತಮ್ಮ ಹಂಚಿಕೆ ಭಾಗದಲ್ಲಿ ಭರಿಸಬೇಕಾದ ಮೊತ್ತ ರೂ. 590.14 ಲಕ್ಷಗಳು.

ನೈರುತ್ಯ ರೈಲ್ವೆ ಇಲಾಖೆಯವರು ಸಲ್ಲಿಸಿರುವ ಅಂದಾಜುಪಟ್ಟಿಯನ್ನು ಪರಿಶೀಲಿಸಿದಾಗ ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಅಂದಾಜುಪಟ್ಟಿಯಲ್ಲಿ ಅಳವಡಿಸಿರುವ ಮೊತ್ತವು ಕಡಿಮೆಯಾಗಿದ್ದು, ಸದರಿ ಯೋಜನೆಗೆ ಹೆಚ್ಚುವರಿಯಾಗಿ ರೂ. 100.00 ಲಕ್ಷಗಳನ್ನು ಹಾಗೂ ರೂ. 326.00 ಲಕ್ಷಗಳನ್ನು ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಬೇಕಾದ ಖಾಸಗಿ ಭೂಮಿಯ ಭೂಸ್ವಾಧೀನ ಮಾಡಿಕೊಳ್ಳಲು ಪ್ರಾರಂಭಿಕ ಅನುದಾನವನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಗೆ 2009–10 ನೇ ಸಾಲಿನ ಆಯವ್ಯಯದಲ್ಲಿ ರೂ. 500 ಲಕ್ಷಗಳ ಅನುಧಾನ, 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 98.86 ಲಕ್ಷಗಳ ಅನುದಾನ ಹಾಗೂ 2011–12 ನೇ ಸಾಲಿನ ಆಯವ್ಯಯದಲ್ಲಿ ರೂ. 98.86 ಲಕ್ಷಗಳನ್ನು ಹಾಗೂ ಮುಂದುವರೆದ ಕಾಮಗಾರಿಗಳಿಗೆ 750.00 ಲಕ್ಷಗಳನ್ನು ಮೀಸಲಿಡಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದ ಘೋಸ್ವಾರೆ ಅಂದಾಜು ಪಟ್ಟಿಯನ್ನು ರೂ. 2220.00 ಲಕ್ಷಗಳಿಗೆ ತಯಾರಿಸಿದ್ದು ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತಿದೆ.

| | | |
|---|---|---|
| ಭಾಗ–1 | ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಬಾಕ್ಸ್ ಮತ್ತು ಅಪ್ರೋಚ್ ರಸ್ತೆ ಕಾಮಗಾರಿಯ ಅಂದಾಜು ಮೊತ್ತ | ರೂ. 17,77,34,581.00 |
| ಭಾಗ–2 | ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ ಪಡೆಸಿಕೊಳ್ಳಲು ಬೇಕಾಗುವ ಭೂ ಪರಿಹಾರದ ಅಂದಾಜು ಮೊತ್ತ | ರೂ. 3,26,00,000.00 |
| | ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ | ರೂ. 1,00,00,000.00 |
| | ವಿದ್ಯುಧೀಕರಣ ಕಾಮಗಾರಿಗಳಿಗೆ | ರೂ. 12,00,000.00 |
| | ಇತರೆ (lump sum) | ರೂ. 4,65,419.00 |
| | **ಒಟ್ಟು** | **ರೂ. 22,20,00,000.00** |

ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಅಂದಾಜು ಮೊತ್ತ ರೂ. 22,20,00,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಪಾಲಿಕೆ ವತಿಯಿಂದ ಭಾಗ-1 ರಲ್ಲಿ 11,87,21,079.00 ಗಳನ್ನು ರೈಲ್ವೆ ಇಲಾಖೆಗೆ ಠೇವಣಿ ಮಾಡುವ ಬಗ್ಗೆ ಆದೇಶ ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಅಂದಾಜು ಮೊತ್ತ ಭಾಗ-2 ರಲ್ಲಿ ವಿವರಿಸಿರುವಂತೆ ರೂ.4,42,65,419.00ಗಳಿಗೆ ಆಡಳಿತಾತ್ಮಕ ಅನುಮೋದನೆ.
3. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.
4. ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಂದಾಜುಪಟ್ಟಿಗೆ ಮೇಲುರುಜು ಮಾಡಿ ನೈರುತ್ತಯ ರೈಲ್ವೆ ಇಲಾಖೆಗೆ ಸಲ್ಲಿಸಲು ಅನುಮೋದನೆ ಹಾಗೂ ರೈಲ್ವೆ ಇಲಾಖೆಯವರು ಟೆಂಡರ್ ಅಹ್ವಾನ ಮಾಡಲು ಕೋರಿ ಅನುಮೋದನೆ.
5. ರೈಲ್ವೆ ಇಲಾಖೆಗೆ ಪಾಲಿಕೆಯಿಂದ ಪಾವತಿಸಬೇಕಾದ ಮೊತ್ತವನ್ನು ಪ್ರಗತಿಯ ಆಧಾರದ ಮೇಲೆ ಆಗಾಗ್ಗೆ ಪಾವತಿ ಮಾಡಲು ಅನುಮೋದನೆ.

ಮೇಲ್ಕಂಡ ಎಲ್ಲಾ ಅಂಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 10-01-2012ರ ವಿಶೇಷ ಆಯುಕ್ತರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 10-01-12ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿ ಒಪ್ಪಿದೆ.**

## 02] ವಿಷಯ ಸಂಖ್ಯೆಃ185/2011-12

ವಿಶೇಷ ಆಯುಕ್ತರವರು ದಿನಾಂಕಃ23-01-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 169ರ ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 200.00 ಲಕ್ಷಗಳಿಗೆ 2010-11ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ತಯಾರಿಸಿ ಅಗತ್ಯ ಅನುಮೋದನೆ ಪಡೆದು, ಕಾಮಗಾರಿ ಸಂಖ್ಯೆಃ 169-12-00001ರಂತೆ ಈಗಾಗಲೇ ಕಾಮಗಾರಿ ಸಂಕೇತ ಲಭ್ಯವಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆಃ ತೆಆಸ್ಥಾಸ/257/2010-11 ದಿನಾಂಕಃ 23-03-2011ರಂತೆ ಗೋಷ್ವಾರೆ 3ರಲ್ಲಿನ ಕ್ರಮ ಸಂಖ್ಯೆ 30ರಲ್ಲಿ ವಾರ್ಡ್ 169 ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ. 200.00 ಲಕ್ಷಗಳಿಗ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 23-01-2012ರ ವಿಶೇಷ ಆಯುಕ್ತರ ಟಿಪ್ಪಣಿ.

" ಮುಂದೂಡಿದೆ "

## 03] ವಿಷಯ ಸಂಖ್ಯೆಃ195/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕಃ 08-12-2010ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೈಸೂರು ರಸ್ತೆ ಮತ್ತು ಪಾದರಾಯನಪುರ-ಹೊಸಹಳ್ಳಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ಥಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿರುವ ಮುಸ್ಲಿಂ ಸ್ಮಶಾನದ ಪ್ರದೇಶದಲ್ಲಿ ರಸ್ತೆ ಅಗಲೀಕರಣಕ್ಕೆ ಅಗತ್ಯವಿರುವ ಸ್ಮಶಾನದ ಜಾಗವನ್ನು ಸ್ವಾಧೀನಪಡಿಸಿಕೊಂಡು ಹಾಗೆ ಕೆಡವಲಾಗುವ ಕಾಂಪೌಂಡ್ ಗೋಡೆ ಮತ್ತು ಈಗಾಗಲೇ ನಿರ್ಮಿಸಿರುವ ನೀರಿನ ಟ್ಯಾಂಕ್‌ಅನ್ನು ಪಾಲಿಕೆವತಿಯಿಂದ ನಿರ್ಮಿಸಿಕೊಡುವ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ

ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದ ಮೇರೆಗೆ Dismantling of existing compound wall and construction of new size stone masonry compound wall and construction of over head tank with water supply facility in the premises of Muslim Burial ground in Mysore road ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2010–11ನೇ ಸಾಲಿನ ದರಗಳನ್ನಾಧರಿಸಿ ತಯಾರಿಸಿದ ರೂ. 34.00 ಲಕ್ಷಗಳ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಮಾನ್ಯ ಆಯುಕ್ತರು ದಿನಾಂಕ:10–01–2011ರಂದು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ರೂ. 34.00ಲಕ್ಷಗಳ ಕಾಮಗಾರಿಗೆ P-0541 ಲೆಕ್ಕ ಶೀರ್ಷಿಕೆಯಲ್ಲಿ ಜಾಬ್ ನಂಬರ್ 136–11–000019ರಂತೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆದ್ದರಿಂದ ಸದರಿ ಕಾಮಗಾರಿಯು ತುರ್ತಾದ್ದರಿಂದ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗುತ್ತಿರುವುದರಿಂದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಪ್ರಗತಿಯಲ್ಲಿರುವ ಕಾಮಗಾರಿಯ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**" ಮುಂದೂಡಿದೆ "**

## 04] ವಿಷಯ ಸಂಖ್ಯೆ:197/2011–12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 08–12–2010ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೈಸೂರು ರಸ್ತೆ ಮತ್ತು ಪಾದರಾಯನಪುರ–ಹೊಸಹಳ್ಳಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ಥಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿರುವ ಕ್ರಿಶ್ಚಿಯನ್ ಸ್ಮಶಾನದ ಪ್ರದೇಶದಲ್ಲಿ ರಸ್ತೆ ಅಗಲೀಕರಣದ ಸಲುವಾಗಿ ಸುಮಾರು 6000 ಚದರಡಿಗಳ ಜಾಗದ ಅಗತ್ಯವಿದ್ದು ಇದರಿಂದಾಗಿ ಭಾದಿತಗೊಳ್ಳುವ ಸಮಾಧಿಗಳನ್ನು ಸ್ಥಳಾಂತರಿಸಲು ಪರ್ಯಾಯ ಜಾಗವನ್ನು ಕೋರಿದ್ದ ಮೇರೆಗೆ ಗೋರಿಪಾಳ್ಯದ ವಿದ್ಯುತ್ ಚಿತಾಗಾರದ ಪಕ್ಕದಲ್ಲಿರುವ ಸುಮಾರು 4,500 ಚರಡಿಗಳ ಜಾಗವನ್ನು ನೀಡಲು ಉದ್ದೇಶಿಸಿ ಮೈಸೂರು ರಸ್ತೆ ಅಗಲೀಕರಣಕ್ಕೆ ಅಗತ್ಯವಿದ್ದ ಜಾಗ ಸ್ವಾಧೀನಪಡಿಸಿಕೊಂಡು ಹಾಗೆ ಕೆಡವಲಾಗುವ ಕಾಂಪೌಂಡ್ ಗೋಡೆಯನ್ನು ಪಾಲಿಕೆವತಿಯಿಂದ ನಿರ್ಮಿಸಿಕೊಡುವ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಮೇರೆಗೆ Dismantling of existing compound wall and construction of new size stone masonry compound wall to the premises of Christan Cemetry in Mysore road ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2010–11ನೇ ಸಾಲಿನ ದರಗಳನ್ನಾಧರಿಸಿ ತಯಾರಿಸಿದ ರೂ. 20.00 ಲಕ್ಷಗಳ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಮಾನ್ಯ ಆಯುಕ್ತರು ದಿನಾಂಕ:10–01–2011ರಂದು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ರೂ. 20.00ಲಕ್ಷಗಳ ಕಾಮಗಾರಿಗೆ P-0541 ಲೆಕ್ಕ ಶೀರ್ಷಿಕೆಯಲ್ಲಿ ಜಾಬ್ ನಂಬರ್ 141–11–000018ರಂತೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆದ್ದರಿಂದ ಸದರಿ ಕಾಮಗಾರಿಯು ತುರ್ತಾದ್ದರಿಂದ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗುತ್ತಿರುವುದರಿಂದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಪ್ರಗತಿಯಲ್ಲಿರುವ ಕಾಮಗಾರಿಯ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**" ಮುಂದೂಡಿದೆ "**

## 05] ವಿಷಯ ಸಂಖ್ಯೆ:201/2011-12

ವಿಶೇಷ ಆಯುಕ್ತರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಓಕಳಿಪುರಂ ಜಂಕ್ಷನ್‌ನಿಂದ ಫೌಂಟೇನ್ ವೃತ್ತದವರೆಗೆ ಲೂಪ್‌ಗಳೊಂದಿಗೆ 8 ಪಥದ ಕಾರಿಡಾರ್ ರಸ್ತೆ, ಅಂಡರ್‌ಪಾಸ್ ಮತ್ತು ರೈಲ್ವೆ ಕೆಳಸೇತುವೆ ನಿರ್ಮಾಣದ ಕಾಮಗಾರಿ ಕೆಲಸವು ರೂ. 115.00 ಕೋಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಈ ಕಾಮಗಾರಿ ಕೆಲಸಕ್ಕೆ ರೂ. 40.00 ಕೋಟಿಗಳ ಅನುದಾನವನ್ನು 2011-12ನೇ ಸಾಲಿನಲ್ಲಿ ಒದಗಿಸಿರುತ್ತಾರೆ.

ಸದರಿ ಕಾಮಗಾರಿಯ 2ನೇ ಹಂತದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕನಿಷ್ಠ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ ಕಾಮಗಾರಿ ಸ್ಥಳವನ್ನು ಹಸ್ತಾಂತರಿಸುವ ಮುನ್ನ ಸದರಿ ಕಾಮಗಾರಿಯ ಸ್ಥಳದಲ್ಲಿ ಅಂಡರ್‌ಪಾಸ್ ಕಾಮಗಾರಿಗೆ ಅಡ್ಡಲಾಗಿ ಇರುವ ರೈಲ್ವೆ ನಿವೇಶನದ ರನ್ನಿಂಗ್ ರೂಮ್ ಕಟ್ಟಡವನ್ನು ತೆರವುಗೊಳಿಸಿ ರೈಲ್ವೇ ಇಲಾಖೆಯವರು ಸೂಚಿಸುವ ಬೇರೆ ನಿವೇಶನದಲ್ಲಿ ರನ್ನಿಂಗ್ ರೂಮ್ ಕಟ್ಟಡವನ್ನು ನಿರ್ಮಿಸುವುದು ಅತ್ಯಾವಶ್ಯಕವಾಗಿರುತ್ತದೆ. ಹಾಲಿ ಇರುವ ರನ್ನಿಂಗ್ ರೂಮ್ ನಿವೇಶನ ಜಾಗದಲ್ಲಿ ಪ್ರಸ್ತಾವಿತ ಯೋಜನೆಯ ಅಂಡರ್‌ಪಾಸ್ ಕಾಮಗಾರಿ ಬರುವುದರಿಂದ ತೆರವುಗೊಳಿಸಿ ಹೊಸದಾಗಿ ರನ್ನಿಂಗ್ ರೂಮ್ ಕಟ್ಟಡವನ್ನು ನಿರ್ಮಿಸುವುದು ಅವಶ್ಯವಾಗಿರುವುದನ್ನು ಮನಗಂಡು ರೈಲ್ವೇ ಇಲಾಖೆಯವರು ಪತ್ರ ಬರೆದು ರನ್ನೀಂಗ್ ರೂಮ್ ಕಟ್ಟಡವನ್ನು ಬದಲೀ ಜಾಗದಲ್ಲಿ ಜರೂರು ಪ್ರಾರಂಭಿಸಲು ಸೂಚನೆ ನೀಡಿರುತ್ತಾರೆ. ಹಾಗೂ ರನ್ನಿಂಗ್ ರೂಮ್ ಕಟ್ಟಡವನ್ನು ನಿರ್ಮಾಣಮಾಡಿದ ನಂತರ ಅಂಡರ್‌ಪಾಸ್ ಕಾಮಗಾರಿ ಪ್ರಾರಂಬಿಸಬೇಕೆಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಈ ಕಛೇರಿಯಿಂದ ಕ್ರಮ ತೆಗೆದುಕೊಂಡು ಸದರಿ ಯೋಜನೆಯ ಯೋಜನಾ ಸಮಾಲೋಚಕರಾದ ಮೆ: ಮಾನಸ ಕನ್ಸಲ್ಟೆಂಟ್ ರವರು ಸದರಿ ರನ್ನಿಂಗ್ ರೂಮ್ ಕಟ್ಟಡದ ಅಂದಾಜನ್ನು ಲೋಕೋಪಯೋಗಿ ಇಲಾಖೆ ದರಪಟ್ಟಿ 2010-11ರಂತೆ ರೂ. 220.00 ಲಕ್ಷಗಳಿಗೆ ತಯಾರಿಸಿ ಸಲ್ಲಿಸಿದ್ದು ಸದರಿ ಅಂದಾಜು ಮೊತ್ತಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರ ವಿಷಯದ ಸಂಖ್ಯೆ: ತೆಆಸ್ಥಾಸ/172/2011-12, ದಿನಾಂಕ:01-08-2011ರಂದು ಕಾಮಗಾರಿ ಯೋಜನಾ ಶಾಖೆಯಲ್ಲಿನ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿರುತ್ತದೆ.

ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಆದೇಶ ಕೋರಿ ಪ್ರಸ್ತಾವನೆಯನ್ನು ಪಾಲಿಕೆಯ ಸಭೇಯ ಮುಂದೆ ಮಂಡಿಸಲು ಕೋರಲಾಗಿರುತ್ತದೆ.

1. **ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರ ರವರ ಸಂಖ್ಯೆ: ತೆಆಸ್ಥಾಸ/172/2011-12, ದಿನಾಂಕ: 01-08-2011ರ ಸಭೆಯ ನಡವಳಿಯಂತೆ ರನ್ನಿಂಗ್ ರೂಮ್ ಕಟ್ಟಡದ ಕಾಮಗಾರಿಯ ಅಂದಾಜು ಮೊತ್ತವಾದ ರೂ. 220.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಅನುಮೋದನೆ.**

2. **ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಾಲಿಕೆಯ ಸಭೆಯಿಂದ ಹಾಗೂ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಪಡೆಯಬೇಕಾಗಿದ್ದು ಪಾಲಿಕೆಯ ಸಭೆ ಹಾಗೂ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಕಾಮಗಾರಿಯನ್ನು ಇ-ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಸಮಿತಿಯ ಅನುಮೋದನೆ ಕೋರಿ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.**

**ನಿರ್ಣಯ: ದಿನಾಂಕ: 22-02-2012ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿ ಒಪ್ಪಿದೆ.**

## 06] ವಿಷಯ ಸಂಖ್ಯೆ: 202/2011-12

**ವಿಷಯ:** ಬ್ಯಾಟರಾಯನಪುರ ವಲಯದ ಬೆಂಗಳೂರು ಹಾಗೂ ಯಲಹಂಕ ಮಧ್ಯೆ ರೈಲ್ವೆ ಹಳಿಗೆ (ಅಲ್ಲಾಳಸಂದ್ರದ ಹತ್ತಿರ ಎಲ್.ಸಿ.ನಂ.11) ಆರ್‌ಓಬಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 26.00 ಕೋಟಿಗಳಿಗೆ ಅನುಮೋದನೆ ಕೋರಿ

**ಉಲ್ಲೇಖ:-1** ಸರ್ಕಾರಿ ಆದೇಶ ಸಂಖ್ಯೆ ಸಂನಅಇ496ಎಂ.ಎನ್.ವೈ 2008, ಬೆಂಗಳೂರು. ದಿ:29-05-2009

* * * * * *

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯ ಮತ್ತು ಉಲ್ಲೇಖದ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ವ್ಯಾಪ್ತಿಯ ಅಲ್ಲಾಳಸಂದ್ರದ ಹತ್ತಿರವಿರುವ ಎಲ್.ಸಿ.ನಂ. 11 ಕಿ.ಮೀ. 15/700-800 ಬಳಿ ಆರ್‌ಯುಬಿ ನಿರ್ಮಿಸಲು ಪ್ರಸ್ತಾವನೆಯಿದ್ದು, ಅಂದಾಜು ಮೊತ್ತ ರೂ. 30.00 ಕೋಟಿಗಳಿಗೆ ಈಗಾಗಲೇ ಘನ ಸರ್ಕಾರದಿಂದ ಆದೇಶ ಸಂಖ್ಯೆ: ನಇ498 ಎಂಎನ್‌ವೈ 2008. ಬೆಂಗಳೂರು ದಿನಾಂಕ: 29/05/2009 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತ್ತಿರುತ್ತದೆ.

ಸದರಿ ಸ್ಥಳದಲ್ಲಿ ರಸ್ತೆ ಕೆಳಸೇತುವೆ ನಿರ್ಮಿಸಲು ಉದ್ದೇಶಿಸಲಾಗಿದ್ದು GAD ಸಹ ಅನುಮೋದನೆಗೊಂಡಿತ್ತು.

ಆದರೆ ನೈರುತ್ಯ ರೈಲ್ವೆ ಇಲಾಖೆಯ ವಿಳಂಬದಿಂದಾಗಿ ಆರ್‌ಯುಬಿಯ ಕಾಮಗಾರಿಯು ನಿಗದಿತ ಸಮಯದಲ್ಲಿ ಪ್ರಾರಂಭವಾಗದೇ ಇದ್ದು, ಇದೇ ಸಮಯದಲ್ಲಿ NH-7 ರಲ್ಲಿ NHAI ರವರು ಹೆಬ್ಬಾಳ (ಮೇಲು ಸೇತುವೆ)ಯಿಂದ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ವರೆಗೆ Elevated highway ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಸರ್ವೀಸ್ ರಸ್ತೆ ನಿರ್ಮಾಣವನ್ನು ಕೈಗೆತ್ತಿಕೊಂಡು ನಿರ್ವಹಿಸುತ್ತಿದ್ದ ಕಾರಣ ನೈರುತ್ಯ ರೈಲ್ವೆ ಇಲಾಖೆ ವತಿಯಿಂದ ಪ್ರಸ್ತಾವನೆಯಲ್ಲಿದ್ದ ಆರ್‌ಯುಬಿ ಹಾಗೂ Elevated highway alignment conflict ಆಗಿರುತ್ತದೆ. ಉದ್ದೇಶಿತ RUB Alignment ಬದಲಾಯಿಸಿದರೆ ಅಗಾಧ ಪ್ರಮಾಣದ ಖಾಸಗಿ ಸ್ವತ್ತನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಅಲ್ಲದೆ ಪರಿಹಾರ ಮೊತ್ತವು ಅಧಿಕವಾಗುತ್ತದೆ.

ಆದಕಾರಣ RUB ಬದಲಾಗಿ ROB ನಿರ್ಮಾಣ ಮಾಡಲು ರೈಲ್ವೇ ಇಲಾಖೆಯೊಂದಿಗೆ ಹಲವು ಭಾರಿ ಚರ್ಚಿಸಿ, ಸ್ಥಳ ತಪಾಸಣೆ ಮಾಡಿ ರೈಲ್ವೆ ಮೇಲು ಸೇತುವೆಯ ನಿರ್ಮಾಣದ ಸಾಧ್ಯತೆ ಪರಿಶೀಲಿಸಲು ನೈರುತ್ಯ ರೈಲ್ವೆ ಇಲಾಖೆಗೆ ಕೋರಲಾಗಿತ್ತು. ನೈರುತ್ಯ ರೈಲ್ವೆ ಇಲಾಖೆಯವರು ಆರ್‌ಓಬಿಗೆ ತಾಂತ್ರಿಕ ಅಂಶಗಳ ಆಧಾರದಲ್ಲಿ ಸದರಿ ರೈಲ್ವೆ ಎಲ್.ಸಿ ನಂ. 11 ಕ್ಕೆ ಆರ್‌ಓಬಿಯು ಪರ್ಯಾಯ ಹಾಗೂ ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ತತ್ಸಂಬಂಧ ನೈರುತ್ಯ ರೈಲ್ವೆ ಇಲಾಖೆಯವರು ರೈಲ್ವೆ ಮೇಲು ಸೇತುವೆಯನ್ನು ನಿರ್ಮಿಸಲು ಜಿ.ಎ.ಡಿ ಹಾಗೂ ಅಂದಾಜು ಪಟ್ಟಿಯನ್ನು ರೈಲ್ವೆ ಇಲಾಖೆಯ ನಿಯಮಾವಳಿಗನುಗುಣವಾಗಿ ತಯಾರಿಸಿ ಸಲ್ಲಿಸಿರುತ್ತಾರೆ. ರೈಲ್ವೆ ಇಲಾಖೆಯಿಂದ GAD ಅನುಮೋದನೆ ನಿರೀಕ್ಷಿಸಲಾಗಿದೆ.

ಈ ಯೋಜನೆಯಲ್ಲಿ 4 ಪಥಗಳ ರಸ್ತೆಯ ಮೇಲುಸೇತುವೆ ನಿರ್ಮಾಣ ಹಾಗೂ ಮೇಲುಸೇತುವೆ ಅಡಿಯಲ್ಲಿ ನ್ಯಾಯಾಂಗ ಬಡಾವಣೆಗೆ ವಾಹನ ಸಂಚಾರಕ್ಕಾಗಿ ಅವಕಾಶ ಕಲ್ಪಿಸಿದೆ. ನಾಗರೀಕ ಸೌಲಭ್ಯಗಳ ಸ್ಥಳಾಂತರ, ಭೂಸ್ವಾಧೀನ ಮತ್ತು ಮೇಲುಸೇತುವೆಗೆ ವಿಧ್ಯುಧೀಕರಣ ಹಾಗೂ ಇತ್ಯಾದಿ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಈ ಆರ್‌ಓಬಿ ನಿರ್ಮಾಣದಿಂದ ನಗರ ಹಾಗೂ ಯಲಹಂಕ ಪಟ್ಟಣ, ಯಲಹಂಕ ಉಪನಗರ, ಇತರೆ ಪಟ್ಟಣ ಮತ್ತು ಜಿಲ್ಲಾ ಕೇಂದ್ರಗಳಿಗೆ ವಾಹನ ಸಂಚಾರ ಸುಗಮವಾಗುತ್ತದೆ. ಇಲ್ಲಿನ ವಾಹನ ದಟ್ಟಣೆಯನ್ನು ದಿನಾಂಕ:ಸೆಪ್ಟೆಂಬರ್ 2009 ರಲ್ಲಿ ಗಣತಿ ಮಾಡಿರುವಂತೆ 2,63,460.00 T.V.U ಆಗಿರುತ್ತದೆ. ROB ನಿರ್ಮಾಣದಿಂದ ವಾಹನಸಂಚಾರ ಸಮಯ ಕಡಿಮೆಯಾಗುವುದು, ಪರಿಸರ ಮಾಲೀನ್ಯ ವಾಹನಗಳ ನಿರ್ವಹಣೆ ವೆಚ್ಚ ಕಡಿಮೆ ಮಾಡಬಹುದಾಗಿದೆ. ಈ ಸ್ಥಳದಲ್ಲಿ RUB ನಿರ್ಮಾಣ

ಕಾಮಗಾರಿಯನ್ನು ಕೈಗೊಳ್ಳಲು 2008-09 ನೇ ಸಾಲಿನ ಆಯವ್ಯಯದಲ್ಲಿ ರೂ. 100.00 ಲಕ್ಷ, 2009-10ರಲ್ಲಿ 150.00ಲಕ್ಷ ಹಾಗೂ 2010-11 ರಲ್ಲಿ 50.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ನೈರುತ್ಯ ರೈಲ್ವೆ ಇಲಾಖೆಯವರು ಸಲ್ಲಿಸಿರುವ ಆರ್‌ಓಬಿ ಗೆ ಸಂಬಂಧಪಟ್ಟ ಅಂದಾಜು ಪಟ್ಟಿಯ ವಿವರ ಈ ಕೆಳಗಿನಂತಿದೆ.

- ಕಾಮಗಾರಿಯ ಅಂದಾಜು ಮೊತ್ತ ರೂ. 2340.41 ಲಕ್ಷಗಳು
- ನೈರುತ್ಯ ರೈಲ್ವೆ ಇಲಾಖೆಯವರು ಭರಿಸಬೇಕಾದ ಮೊತ್ತ ರೂ. 809.19 ಲಕ್ಷಗಳು
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಭರಿಸಬೇಕಾದ ಮೊತ್ತ ರೂ.1531.22 ಲಕ್ಷಗಳು

ಒಟ್ಟಾರೆ ಯೋಜನೆಯ ಅಂದಾಜುಪಟ್ಟಿಯ ಮೊತ್ತ ರೂ. 2600.00 ಲಕ್ಷಗಳಾಗಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಭಾಗ-1 | ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಬಾಕ್ಸ್ ಮತ್ತು ಅಪ್ರೋಚ್ ರಸ್ತೆ ಕಾಮಗಾರಿಯ ಅಂದಾಜು ಮೊತ್ತ | ರೂ.2340.41 ಲಕ್ಷಗಳು |
| ಭಾಗ-2 | ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ ಪಡೆಸಿಕೊಳ್ಳಲು ಅವಶ್ಯಕವಿರುವ ಮೊತ್ತ | ರೂ.222.00 ಲಕ್ಷಗಳು |
| | ಮೇಲುಸೇತುವೆಯ ವಿದ್ಯುಧೀಕರಣಕ್ಕೆ | ರೂ. 20.00 ಲಕ್ಷಗಳು |
| | ಇತರೆ (Miscellaneous and unforeseen charges) | ರೂ.17.59 ಲಕ್ಷಗಳು |
| | ಭಾಗ -2 ರ ಮೊತ್ತ | ರೂ.259.59 ಲಕ್ಷಗಳು |
| | **ಒಟ್ಟು ಮೊತ್ತ** | ರೂ.2600.00 ಲಕ್ಷಗಳು |

ಸದರಿ ROB ಯೋಜನೆಯ ಅಂದಾಜು ಪಟ್ಟಿ ಮೊತ್ತ ರೂ.2600.00 ಲಕ್ಷಗಳಾಗಿದ್ದು, ಇದು ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುವ ರೂ.3000.00 ಲಕ್ಷಗಳಿಗಿಂತ ಕಡಿಮೆ ಇದ್ದು ಮತ್ತು ಆರ್ಥಿಕ ಹೊರೆ ಇರುವುದಿಲ್ಲ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಘನ ಸರ್ಕಾರದಿಂದ ಈಗಾಗಲೇ ಅನುಮೋದನೆಗೊಂಡಿರುವ RUB ಯೋಜನೆ ಮೊತ್ತ ರೂ.3000.00 ಲಕ್ಷಗಳ ಬದಲು ROB ಯೋಜನೆ (ರೂ. 2600.00 ಲಕ್ಷಗಳು) ಯನ್ನು ಕೈಗೊಳ್ಳಲು.
2. ಪಾಲಿಕೆಯಿಂದ ರೈಲ್ವೆ ಇಲಾಖೆಗೆ ಪಾವತಿಸಬೇಕಾದ ಮೊತ್ತ ರೂ. 1531.22 ಲಕ್ಷಗಳಾಗಿದ್ದು, ಇದನ್ನು ರೈಲ್ವೆ ಇಲಾಖೆಗೆ ನೀಡಲು ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಅಂದಾಜು ಮೊತ್ತ ರೂ.259.59 ಲಕ್ಷಗಳಿಗೆ ಪ್ರತ್ಯೇಕ ಆಡಳಿತಾತ್ಮಕ ಅನುಮೋದನೆ.
3. ಈ ಹಿಂದೆ ಸದರಿ ಜಾಗದಲ್ಲಿ RUB ನಿರ್ಮಿಸಲು ರೂ.3000.00 ಲಕ್ಷಗಳ ಅಂದಾಜಿಗೆ ಘನ ಸರ್ಕಾರದಿಂದ ಈಗಾಗಲೇ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದ್ದು ಈಗ RUB ಬದಲಾಗಿ ಅದೇ ಸ್ಥಳದಲ್ಲಿ ROB ನಿರ್ಮಿಸಲು ರೂ.2600.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿರುವ ಅಂಶವನ್ನು ಸರ್ಕಾರದ ಗಮನಕ್ಕೆ ತಂದು ಅನುಮೋದನೆ ಪಡೆಯಲು.
4. ಸರ್ಕಾರದ ಅನುಮೋದನೆ ನಿರೀಕ್ಷಿಸಿ ನೈರುತ್ಯ ರೈಲ್ವೆ ಇಲಾಖೆಯು ಸಲ್ಲಿಸಿರುವ ಅಂದಾಜು ಪಟ್ಟಿಗೆ ಮೇಲುರುಜು ಮಾಡಲು ಅನುಮತಿ.

5. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅವಶ್ಯಕವಿರುವ **1716.61** ಚ.ಮೀ ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ದಿನಾಂಕಃ 25–02–12ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿ ಒಪ್ಪಿದೆ.**

**07] ವಿಷಯ ಸಂಖ್ಯೆಃ206/2011–12**

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ: ರಾಜ್‌ಕುಮಾರ್ ವಾರ್ಡ್ ಸಂಖ್ಯೆ: 106ರ ರಾಜಾಜಿನಗರ 6ನೇ ಬ್ಲಾಕ್‌ನಿಂದ ಮಾಗಡಿ ಮುಖ್ಯ ರಸ್ತೆವರೆಗೆ ಆರ್.ಸಿ.ಸಿ. ಚರಂಡಿ ಹಾಗೂ ಪಾದಚಾರಿ ಮಾರ್ಗ ನಿರ್ಮಾಣ ಮಾಡುವ (Construction of RCC drain and footpath from Rajajinagar 6th block to Magadi main road ) ಕಾಮಗಾರಿಗೆ ರೂ. 120.00 ಲಕ್ಷಗಳ ಅಂದಾಜು ಪಟ್ಟಿಯು ಅನುಮೋದನೆಗೊಂಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು E-procurement ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಒಟ್ಟು ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ತಾಂತ್ರಿಕ ಬಿಡ್‌ನಲ್ಲಿ 2 ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ. ಜಿ.ಚಂದ್ರಶೇಖರ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿರುತ್ತಾರೆ. ಇವರುಗಳ ವಿವರ ಕೆಳಕಂಡಂತಿರುತ್ತದೆ.

| ಕ್ರ. ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡವಾರು ಹೆಚ್ಚು/ಕಡಿಮೆ (2010–11ರ ದರಗಳ ಮೇಲೆ ಹಾಗೂ ತ್ರೈಮಾಡಿಕ ನೀಡಿಕೆ ದರ) | ಶೇಕಡವಾರು ಹೆಚ್ಚ/ಕಡಿಮೆ(201–12ನೇ ಸಾಲಿನ ದರಗಳ ಪ್ರಕಾರ) | ಷರಾ |
|---|---|---|---|---|---|---|
| 1 | ಶ್ರೀ.ಜಿ.ಚಂದ್ರಶೇಖರ್ | **1,15,94,744.00** | **1,08,87,358.00** | 6.1% ಕಡಿಮೆ | 12.02% ಕಡಿಮೆ | L1 |
| 2 | ಶ್ರೀ.ನರಸಿಂಹಮೂರ್ತಿ .ಹೆಚ್. | | **1,29,58,713.00** | 11.76% ಹೆಚ್ಚುವರಿ | 4.707%ಹೆಚ್ಚುವರಿ | L2 |

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ L1 ಗುತ್ತಿಗೆದಾರರಾದ ಶ್ರೀ. ಜಿ.ಚಂದ್ರಶೇಖರ್ ರವರ ಟೆಂಡರ್ ಅನ್ನು 2011–12ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 12.02% ರಷ್ಟು ಕಡಿಮೆ ಇರುತ್ತದೆ.

ಈ ಮೇರೆಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರಾದ ಶ್ರೀ. ಜಿ.ಚಂದ್ರಶೇಖರ್ ರವರ ಗುತ್ತಿಗೆ ಮೊತ್ತ ರೂ. 1,08,87,358.00 ( ಒಂದು ಕೋಟಿ ಎಂಟು ಲಕ್ಷದ ಎಂಬತ್ತೇಳು ಸಾವಿರದ ಮೂರು ನೂರ ಐವತ್ತೆಂಟು)ಗಳ ಟೆಂಡರ್ ಅನ್ನು ಅನುಮೋದಿಸಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ.**

## 08] ವಿಷಯ ಸಂಖ್ಯೆ:207/2011–12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಿಟ್ ಅರ್ಜಿ ಸಂಖ್ಯೆ WP/31394/2009 ಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯವು ಬೃಹತ್ ಮಳೆನೀರುಗಾಲುವೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಆದೇಶ ಜಾರಿ ಮಾಡಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಮುಖವಾಗಿ ವೃಷಭಾವತಿ, ಛಲ್ಲಘಟ್ಟ, ಹೆಬ್ಬಾಳ ಮತ್ತು ಕೋರಮಂಗಲ ಕಣಿವೆಗಳು ಹಾಗೂ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡಿರುವ ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಮಹದೇವಪುರ, ಯಲಹಂಕ ಹಾಗೂ ದಾಸರಹಳ್ಳಿ ವಲಯಗಳಲ್ಲಿನ ಬೃಹತ್ ಮಳೆನೀರುಗಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಬೇಕಾಗಿದ್ದು, ಬೃಹತ್ ನೀರುಗಾಲುವೆಗಳ ಒಟ್ಟು ಉದ್ದವು ಸುಮಾರು 857 ಕಿ.ಮೀಗಳಿರುತ್ತದೆ ಒತ್ತುವರಿ ತೆರವುಗೊಳಿಸಲು ಪ್ರಮುಖವಾಗಿ ಹಾಗೂ ಪ್ರಾಥಮಿಕವಾಗಿ ವಿವಿಧ ಸ್ಥಳಗಳಲ್ಲಿನ ಕಣಿವೆಗಳ ಮೂಲ ಅಳತೆಗಳನ್ನು ತಿಳಿದುಕೊಳ್ಳುವುದು ಅನಿವಾರ್ಯವಾಗಿದ್ದು, ಕಂದಾಯ ಸರ್ವೆ ಕಾರ್ಯವನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಪಾಲಿಕೆಯಲ್ಲಿ ಅಗತ್ಯವಿರುವ ಭೂಮಾಪಕರು (ಸರ್ವೆಯರ್‌ಗಳು) ಇಲ್ಲದೇ ಇರುವುದರಿಂದ, ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ಕಛೇರಿಯಿಂದ ಭೂಮಾಪಕರುಗಳನ್ನು ಎರವಲು ಸೇವೆಯ ಆಧಾರದ ಮೇಲೆ ಪಾಲಿಕೆಗೆ ನಿಯೋಜಿಸಿಕೊಳ್ಳಲಾಗಿದ್ದು, ಇವರುಗಳು ತಮ್ಮ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿ ಅಗತ್ಯವಿರುವ ದಾಖಲೆಗಳನ್ನು ಸಿದ್ಧಪಡಿಸಲು "Total Station" ಯಂತ್ರ ಬಳಸುವುದರ ಜೊತೆಗೆ ಒತ್ತುವರಿ ತೆರವುಗೊಳಿಸಲು ಅಗತ್ಯವಿರುವ ನಕ್ಷೆಗಳನ್ನು ಸಿದ್ಧಪಡಿಸಲು ನುರಿತ ಪರಿಣತರನ್ನೊಳಗೊಂಡ ಸಲಹೆಗಾರರನ್ನು ನೇಮಕಮಾಡಿಕೊಳ್ಳುವ ಅಗತ್ಯವಿರುತ್ತದೆ. ಸಿದ್ಧಪಡಿಸಿದ ವಿವರಗಳನ್ನೊಳಗೊಂಡ ದಾಖಲೆಗಳನ್ನು Digitisation ಮಾಡಿ ದಾಖಲೆಗಳನ್ನು ಸಿದ್ಧಪಡಿಸುವ ಕೆಲಸಕ್ಕೆ ಪ್ರತಿ ಕಿಲೋಮೀಟರ್‌ಗೆ ಸುಮಾರು ರೂ. 13,200 ಗಳು ವೆಚ್ಚವಾಗುವುದಾಗಿ ಅಂದಾಜಿಸಲಾಗಿದೆ. ಇದರಂತೆ 857.00 ಕಿಲೋಮೀಟರ್‌ಗಳಿಗೆ ಒಟ್ಟು ರೂ. 1,13,12,400/–ಗಳ ಅಗತ್ಯವಿರುತ್ತದೆ.

ಬೃಹತ್ ಮಳೆನೀರುಗಾಲುವೆಗಳ ಒತ್ತುವರಿ ತೆರವುಗೊಳಿಸುವ ಕಾರ್ಯವನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ತುರ್ತಾಗಿ ನಿರ್ವಹಿಸಲೇಬೇಕಾಗಿರುವುದರಿಂದ ಹಾಗೂ ತಡಮಾಡಿದ್ದಲ್ಲಿ, ಅರ್ಜಿದಾರರು ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸುವ ಸಂಭವವಿರುವುದರಿಂದ, ಸರ್ವೆ ಕಾರ್ಯ ನಿರ್ವಹಿಸಿ ಒತ್ತುವರಿ ತೆರವುಗೊಳಿಸಲು ಅಗತ್ಯವಿರುವ ದಾಖಲೆಗಳನ್ನು ಸಿದ್ಧಪಡಿಸಲು ನುರಿತ ಸಲಹೆಗಾರರನ್ನು ನೇಮಕ ಮಾಡುವ ಸಂಬಂಧ ಅಗತ್ಯವಿರುವ ರೂ. 1,13,12,400/–ಗಳ ಅಂದಾಜು ಮೊತ್ತಕ್ಕೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಯಿತು.**

## 09] ವಿಷಯ ಸಂಖ್ಯೆ:208/2011–12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂಃ 142ರ ಪುಟ್ಟಣ್ಣರಸ್ತೆಯಿಂದ ಗಾಂಧಿಬಜಾರ್ ಮುಖ್ಯ ರಸ್ತೆಯ ವರೆಗೆ ಹರಿಯುತ್ತಿರುವ ಬೃಹತ್ ನೀರುಗಾಲುವೆಯ (Construction of SWD from Puttanna road to Gandhi bazar main road in ward NO:142) ಕಾಮಗಾರಿಯನ್ನು E-Procurement ಮುಖಾಂತರ ಟೆಂಡರ್‌ಅನ್ನ ಅಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಶ್ರೀ.ಪ್ರಶಾಂತ.ಕೆ.ಸಿ. ಗುತ್ತಿಗೆದಾರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ ಇವರು ನಮೂದಿಸಿರುವ ದರಗಳು 2011–12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 7.99ರಷ್ಟು ಹೆಚ್ಚುವರಿಯಾಗಿದ್ದು, ಈ ದರಗಳು ಸ್ಪರ್ಧಾತ್ಮಕವಾಗಿರುವುದರಿಂದ ಒಪ್ಪಬಹುದಾಗಿದೆ.

ಆದುದರಿಂದ ಶ್ರೀ. ಪ್ರಶಾಂತ.ಕೆ.ಸಿ. ಗುತ್ತಿಗೆದಾರರು ನಮೂದಿಸಿರುವ ಶೇಕಡ 7.99ರಷ್ಟು ಹೆಚ್ಚುವರಿ ದರವಾದ ರೂ. 1,11,34,307.2ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 10] ವಿಷಯ ಸಂಖ್ಯೆ:209/2011-12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂಃ 142ರ ಗಾಂಧಿಬಜಾರ್ ತರಕಾರಿ ಮಾರುಕಟ್ಟೆಯ ಹಿಂಭಾಗದಿಂದ ಗೋವಿಂದಪ್ಪ ರಸ್ತೆಯಲ್ಲಿ ಹರಿಯುತ್ತಿರುವ ಬೃಹತ್ ನೀರುಗಾಲುವೆಯ (Construction of RCC box drain from Gandhi bazar Vegetable market back side Mori bazar to Govindappa road in ward NO:142) ಕಾಮಗಾರಿಯನ್ನು E-Procurement ಮುಖಾಂತರ ಟೆಂಡರ್‌ಅನ್ನು ಅಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಶ್ರೀ.ಪುಟ್ಟಸ್ವಾಮಿಗೌಡ ಗುತ್ತಿಗೆದಾರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ. ಇವರು ನಮೂದಿಸಿರುವ ದರಗಳು 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 7.47ರಷ್ಟು ಹೆಚ್ಚುವರಿಯಾಗಿದ್ದು, ಈ ದರಗಳು ಸ್ಪರ್ಧಾತ್ಮಕವಾಗಿರುವುದರಿಂದ ಒಪ್ಪಬಹುದಾಗಿದೆ.

ಆದುದರಿಂದ ಶ್ರೀ. ಪುಟ್ಟಸ್ವಾಮಿ ಗೌಡ. ಗುತ್ತಿಗೆದಾರರು ನಮೂದಿಸಿರುವ ಶೇಕಡ 7.47ರಷ್ಟು ಹೆಚ್ಚುವರಿ ದರವಾದ ರೂ. 1,05,40,011.58ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 11] ವಿಷಯ ಸಂಖ್ಯೆ:210/2011-12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದೆ, ಯಲಹಂಕ ವಲಯದ ವ್ಯಾಪ್ತಿಯಲ್ಲಿ ಯಾವುದೇ ಕ್ರೀಡಾಂಗಣವು ಇಲ್ಲದ ಪ್ರಯುಕ್ತ ಸಾರ್ವಜನಿಕ ಕೋರಿಕೆಯಂತೆ, ಸ್ಥಳೀಯ ಶಾಸಕರು, ಸುಸಜ್ಜಿತ ಆತ್ಯಾಧುನಿಕ ಕ್ರೀಡಾಂಗಣವನ್ನು ನಿರ್ಮಾಣಮಾಡಲು ಸೂಚಿಸಿರುತ್ತಾರೆ, ಈ ಸಂಬಂಧವಾಗಿ ಯಲಹಂಕ ಉಪನಗರದ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಸುಮಾರು ಎರಡು ಎಕರೆ ಹದಿನೆಂಟು ಗುಂಟೆ ಜಮೀನನ್ನು ಕಾಂಪೋಸಿಟ್ ಇಂಡೋರ್ ಮತ್ತು ಔಟ್ ಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಆಯ್ಕೆಮಾಡಿಕೊಳ್ಳಲಾಗಿರುತ್ತದೆ. ಈ ಸಂಬಂಧವಾಗಿ ಬಿ.ಬಿ.ಎಂ.ಪಿ ಎಂಪ್ಯಾನೆಲ್ಡ್ ಆರ್ಕಿಟೆಕ್ ಆದ ನಂದೀಶ್ ಅಸೋಸಿಯೇಟ್ಸ್ ರವರೊಂದಿಗೆ ಚರ್ಚಿಸಿ ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ, ಸದರಿ ಯೋಜನಾ ವೆಚ್ಚವು ರೂ.397.50 ಲಕ್ಷಗಳಾಗಿದ್ದು, ಮಾನ್ಯ ಆಯುಕ್ತರು ಸದರಿ ಕಾಮಗಾರಿ ಕೈಗೆತ್ತಿಕೊಳ್ಳಲು ಸದರಿ ಕಡತದ ಕಂಡಿಕೆ 7ರಲ್ಲಿ ದಿನಾಂಕ: 22-11-09 ರಂದು ಅನುಮೋದನೆ ನೀಡಿದ್ದು, ಸದರಿ ಅನುಮೋದನೆಯನ್ನು ಅಂದಿನ ಮಾನ್ಯ ಆಡಳಿತಗಾರರು ಪುರಸ್ಕರಿಸಿರುತ್ತಾರೆ. ಸದರಿ ಕಾಮಗಾರಿಗೆ ದಿನಾಂಕ: 10-1-10ರಂದು ಮಾನ್ಯ ಮುಖ್ಯ ಮಂತ್ರಿಗಳು ಅಡಿಗಲ್ಲು ಮತ್ತು ಶಂಕುಸ್ಥಾಪನೆ ನೆರವೇರಿಸಿರುತ್ತಾರೆ. ಈ ಸಂಬಂಧವಾಗಿ ಮುಖ್ಯ ಲೆಕ್ಕಾಧಿಕಾರಿಗಳು ರೂ.397.50 ಲಕ್ಷಗಳಿಗೆ ವರ್ಕ್ ಕೋಡ್: 000-11-ಎಂ-ಪಿ-ಸಿ-ಜಿ-ಎಫ್-ಓ-001ಅನ್ನು ದಿನಾಂಕ: 23-4-2010 ನೀಡಿರುತ್ತಾರೆ.

ಸದರಿ ಕಾಮಗಾರಿಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ದ್ವಿಲಕೋಟೆ ಮಾದರಿಯಲ್ಲಿ ರೂ.327.00 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಒಬ್ಬ ಬಿಡ್‌ದಾರರು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಸಿಂಗಲ್ ಟೆಂಡರ್ ಎಂದು

ಪರಿಗಣಿಸಿ ಟೆಂಡರ್ ಅನ್ನು ರದ್ದುಪಡಿಸಲಾಗಿರುತ್ತದೆ, ತದನಂತರ ಮಾನ್ಯ ಆಯುಕ್ತರು, ಸ್ಥಳೀಯ ಶಾಸಕರು ಹಾಗೂ ಜಂಟಿ ಆಯುಕ್ತರು ದಿನಾಂಕ:9–7–2011 ರಂದು ಯಲಹಂಕ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಉದ್ದೇಶಿಸಿರುವ ಇಂಡೋರ್ ಮತ್ತು ಔಟ್ ಡೋರ್ ಕ್ರೀಡಾಂಗಣ ಬದಲಾಗಿ ಆಟದ ಮೈದಾನದಲ್ಲಿ ಔಟ್‌ಡೋರ್ ಕ್ರೀಡಾಂಗಣ ಮಾತ್ರ ನಿರ್ಮಿಸುವುದೆಂದು ಅಭಿಪ್ರಾಯಿಸಿದ್ದು, ಅದರಂತೆ ತ್ವರಿತವಾಗಿ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿರುತ್ತಾರೆ. ಇದರನ್ವಯ ಸದರಿ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ರೂ.250.00ಲಕ್ಷಗಳಿಗೆ ಮಾನ್ಯ ಯಲಹಂಕ ಶಾಸಕರು ಹಾಗೂ ಪೂಜ್ಯ ಮಹಾಪೌರರು ದಿನಾಂಕ:15–3–2012 ರಂದು ಸೂಚಿಸಿರುವಂತೆ, ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಸಲುವಾಗಿ ರೂ.397.5 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕ್ರಿಯೆ ನಡೆಸಲು ಮಾನ್ಯ ಆಯುಕ್ತರು ದಿನಾಂಕ:16–3–2012 ರಂದು ಆದೇಶಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಪಾಲಿಕೆ ಸಭೆಯ ಮುಂದೆ ಮಂಡಿಸಲು ಸಮಿತಿ ತೀರ್ಮಾನಿಸಿತು.**

**(ಜಿ.ಹೆಚ್.ರಾಮಚಂದ್ರ)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**<u>ಪ್ರತಿಯನ್ನುಃ</u>**

1. ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
3. ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಆಯುಕ್ತರವರಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರವರಿಗೆ / ಅಪರ ಆಯುಕ್ತರು (ಯೋಜನೆ) ರವರಿಗೆ ಕಳಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.